ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೯ Volume 149	ಬೆಂಗಳೂರು, ಗುರುವಾರ, ಆಗಸ್ಟ್ ೨೧, ೨೦೧೪ (ಶ್ರಾವಣ ೩೦, ಶಕ ವರ್ಷ ೧೯೩೬) Bangalore, Thursday, August 21, 2014 (Shravana 30, Shaka Varsha 1936)	ಸಂಚಿಕೆ ೩೪ Issue 34

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

HOME SECRETARIAT

Subject : Appointment of Member from Civil Society to the State Police Complaints Authority-reg.

Read :

1} Government Order No. HD 59 POSAE 2009, dated 03-12-2010.

2} The Karnataka Police (Amendment) Act, 2012 issued vide Special Gazette dated 09-08-2012.

3} Notification No.HD 208 POSAE 2012 dated 04-09-2012.

4} Government Order No. HD 208 POSAE 2012, dated 24-07-2013.

5} Government Order No. HD 41 POSAE 2013, dated: 10-09-2013..

6) Letter dated: 14-02-2013 from the Member Secretary, Search Committee for selection of Civilian Member for State Police Complaints Authority.

Preamble:

Government in its order referred to at (1) above, has constituted the State Police Complaints Authority and the District Police Complaints Authority on full time basis to look into the complaints against officers of the rank of Superintendent of Police and above including Additional Superintendent of Police and officers of and below the rank of Deputy Superintendent of Police respectively.

In the Special Gazette referred to at (2) above, Government has amended the Karnataka Police Act, 1963 (Karnataka Act No.4 of 1964) and made suitable amendment to Section 20C of the Act and made provision to constitute the State Police Complaints Authority.

In the Notification dated 04-09-2012 referred to at (3) above Government has constituted the State Police Complaints Authority and District Police Complaints Authority for the purpose of exercising such function and discharging such duties as may be assigned to it, by or under Section 20C and 20D of the Karnataka Police Act, 1963 (Karnataka Act 4 of 1964).

In the Government Order referred to at (4) above, Government has appointed Hon'ble Justice M.P.Chinnappa, Former Judge of High Court of Karnataka as the Chairman of the State Police Complaints Authority.

In pursuance of Section 20C of the Act One member shall be from Civil Society. The Civil Society member shall be chosen by the State Government form amongst the panel of. three names recommended by the search committee. In the Government Order referred to (5) above Government has constituted Search Committee to recommend panel of names from among the members of the Civil Society for nomination to the State Police Complaints Authority & District Police Complaints Authority.

In his letter referred to (6) above, the Member Secretary, State Police Complaints Authority has stated that the Search Committee met on 03-02-2014 in the chambers of Member, State Human Rights Commission & President of the Search Committee has recommended a panel of four names for considering one among the panel to be nominated as Member of State Police Complaints Authority. Accordingly, Government are pleased to pass the following orders:-

GOVERNMENT ORDER NO.HD 41 POSAE 2013, BANGALORE DATED: 27-05-2014.

In the circumstances explained above and in pursuance of section 20C of the Karnataka Police (Amendment) Act, 2012, Government of Karnataka is pleased to appoint Dr. Sudarshan.H.Ballal, Manipal Hospital, Bangalore as the Member of the State Police Complaints Authority, from the Civil Society.

The terms and conditions of the members of the State Police Complaints Authority will be issued separately.

BY ORDER AND IN THE NAME OF THE
GOVERNOR OF KARNATAKA

PR - 462
SC - 100

T.N. RAVIPRAKASH
Under Secretary to Government,
Home Department (Police Services-A)

HEALTH AND FAMILY WELFARE SECRETARIAT

Subject : Establishment of new Government Medical Colleges in the District of Tumkur, Chitradurga, Haveri, Bagalkote, Chikkaballapur and Yadgir from the academic year 2015-16.

Read : 1. Government Order NO. HFW 146 MPS 2012 dated 07-12-2012

2. Budget announcement of the year 2014-15.

PREAMBLE:

Sanction is accorded for the establishment of 07 new Government Medical Colleges in the Districts of Tumkur, Chamarajanagar, Kodagu (Madikeri), Chitradurga, Koppal, Gadag and Haveri from the academic year 2013-14 read at (1) above.

Establishment of 6 new Medical Colleges in. Tumkur, .Chitradurga, Chikkaballapur, Bagalakot, Haveri and Yadgiri districts during 2014-15 in collaboration with Rajiv Gandhi Heath- Sciences University read at (2) of the 2014-15 budget announcement.

Karnataka State has been the pioneer in the filed of Professional Education especially in Medical. Education. In Karnataka, there are already 10 Government Autonomous Medical Colleges functioning in the 10 Districts of Bangalore, Mysore, Bellary, Hubli, Bidar, Raichur, Belgaum,· Shimoga. Hassan and Mandya. It is experienced that there has been great demand for the services of doctors. Government of Kamataka have noticed the dearth of hands in medical services commensurate with the ratio of population of India. In order to overcome this deficiency and to encourage meritorious poor and backward students in the field of Medical Education in the State; it is "found essential to establish some more new Government Colleges with a minimum intake of 150 seats in each college in another 03 districts of Bagalkote, Chikkaballapur and Yadgir from the academic year 2014-15 where, at present, there are no Government Medical Colleges.

Providing budgetary provisions in pursuit of fulfillment of the requirement and norms of the Medical Council of India prescribed for establishment of Medical Colleges so as to enable Medical Council of India to cause inspection of the site in order to start, the Medical Colleges has been considered by the Government of Kamataka.

It has been estimated that the capital expenditure for establishment of each Government Medical College shall be Rs.199.00 Crores and which includes civil works for construction of college building, teaching hospital, Girls and Boys hostels, Quarters for the Staff, Library etc and Rs.2.50 Crores for procurement of Medical Equipments. The funds will be released in a staggered manner for each Medical College over the next three years i.e., 2014-15, 2015-16 and 2016-17.

The clinical facilities for the proposed new 06 Government Medical Colleges will be availed in the existing 06 Government District Hospitals by entering into a MoU with the Department of Health and Family Welfare Services of the State Government.

It is absolutely essential to adopt and enforce the time schedule prescribed by Government of India and Medical Council of India in order to establish the new medical colleges as per the requirements of the Medical Council of India. Further, to start the admissions ·to the medical courses in the academic session, 2015-16 there .should complete compliance with the Medical Council of India Regulations, Rules and norms. Therefore a budgetary provision has to be ·made in the current financial year 2014-15 to take up the construction and other preparatory work immediately.

Government Order No.HFW·172 MPS 2014, Bangalore dated 12.06.2014

In view of the above, (l) Sanction is accorded to establishment of 06 new . Government Medical- Colleges in the Districts of Tumkur, Chitradurga, Haveri, Bagalkote, Chikkaballapur and Yadgir from the academic year 2015-16 with an intake of 150 MBBS seats; and .

(2) Sanction is accorded to establish and .register institutions under Karnataka. Co-operative Societies Registration Act; 1960 and operate to establish medical colleges and hospitals at Tumkur, Chitradurga, Chikkaballapur, Bagalkote, Haveri and Yadgir; and

(3) Santion is accorded to establish and operate Medical College and Hospital at Tumkur, Chitradurga, Chikkaballapur, Bagalkote, Haveri and Yadgir respectively as follows :

(i) Tumkur Institute of Medical Sciences, Tumkur;

(ii) Chitradurga Institute of Medical Sciences, Chitradurga;

(iii) Chikkaballapur Institute of Medical Sciences, Chikkaballapur;

(iv) Bagalkote Institute of Medical Sciences, Bagalkote;

(v) Haveri Institute of Medical Sciences, Haveri;

(vi) Yadgir Institute of Medical Sciences, Yadgir; and

(4) Sanction is accorded to register Bye-laws and to formulate Cadre and Recruitment Rules of teaching and non-teaching personnel of the said medical college and hospital.

Orders of Government for release of funds in the current financial year shall be issued separately.

BY ORDER AND IN THE NAME OF THE
GOVERNOR OF KARNATAKA

PR - 520
SC - 100

K.S. JAGADISHA REDDY
Under Secretary to Government(I/C)
Health and Family Welfare Department (Medical Education)

ಇಂಧನ ಸಚಿವಾಲಯ

ವಿಷಯ : ಶ್ರೀಮತಿ ಜೈನಾಬಿ ಕೋಂ ದಿ: ಕೆ.ಬಾಬು, ಡ್ರೈವರ್, ಶಿವಮೊಗ್ಗ ಇವರಿಗೆ ನ್ಯಾಯಾಲಯದ ಆದೇಶದಂತೆ ಉಪದಾನ ಹಾಗೂ ಗಳಿಕೆ ರಜೆ ನಗದೀಕರಣ ಸೌಲಭ್ಯಗಳಿಗೆ ಬಡ್ಡಿ ಪಾವತಿಸುವ ಬಗ್ಗೆ.

ಓದಲಾಗಿದೆ :
1. PRl. Civil Judge (sr-dvn) Chitradurga ನ್ಯಾಯಾಲಯದ Decree suit no.34/2005 dt:31-03-2008.
2. ಆರ್.ಎ.ಸಂಖ್ಯೆ: 63/2008 ಡಿಸ್ಟ್ರಿಕ್ಟ್ ಜಡ್ಜ್, ಚಿತ್ರದುರ್ಗ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ.
3. ಆರ್.ಎ.ಸಂಖ್ಯೆ: 63/2008 ಡಿಸ್ಟ್ರಿಕ್ಟ್ ಜಡ್ಜ್, (Fast Track Court), ಚಿತ್ರದುರ್ಗ ರವರಿಂದ ನೀಡಿರುವ ಅಂತಿಮ ತೀರ್ಪು ದಿನಾಂಕ: 16–11–2009.
4. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ (ವಿಶೇಷ) 199 ಪಿಇಎನ್ 93 ದಿನಾಂಕ: 13–09–1994.
5. ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ) ಸಂಖ್ಯೆ: ಆಇ 161 ಪಿಇಎನ್ 1 2013 ದಿನಾಂಕ: 12–09–2013.

ಪ್ರಸ್ತಾವನೆ :

ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ:31–03–2008ರ ತೀರ್ಪಿನಲ್ಲಿ Prl. Civil Judge (Sr dvn), ಚಿತ್ರದುರ್ಗ ನ್ಯಾಯಾಲಯವು ವಿದ್ಯುತ್ ಪರಿವೀಕ್ಷಣಾ ಇಲಾಖೆಯ ವಿದ್ಯುತ್ ಪರಿವೀಕ್ಷಕರ ಕಚೇರಿ ಶಿವಮೊಗ್ಗ ವಿಭಾಗ, ಶಿವಮೊಗ್ಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಕೆ. ಬಾಬು, ವಾಹನ ಚಾಲಕ ಇವರು ಸರ್ಕಾರಿ ಸೇವೆಯಲ್ಲಿರುವಾಗ ರಸ್ತೆ ಅಪಘಾತಕ್ಕೊಳಗಾಗಿ ಮರಣ ಹೊಂದಿದ್ದರಿಂದ ಅವರ ಕುಟುಂಬಕ್ಕೆ ಕುಟುಂಬ ಪಿಂಚಣಿ ಮತ್ತು ಉಪದಾನಗಳನ್ನು ಮಂಜೂರು ಮಾಡಿ, ಮರಣ ಉಪದಾನ ಮೊತ್ತ ರೂ. 10,000/–ಗಳನ್ನು ದಿನಾಂಕ:28–02–2003 ಹಾಗೂ ಗಳಿಕೆ ರಜೆ ಅಧ್ಯರ್ಪಣಾ ಮೊತ್ತ ರೂ. 35,000/– ಗಳನ್ನು ದಿನಾಂಕ:4–8–2004 ರಂದು ವಿಳಂಬವಾಗಿ ಪಾವತಿಸಿದ ಕಾರಣ ಶ್ರೀಮತಿ ಜೈನಾಬಿ ಗೌಹರ್ ಜಾನ್ ದಿವಂಗತ ಶ್ರೀ ಕೆ. ಬಾಬು, ವಾಹನ ಚಾಲಕ ಇವರು ಸಲ್ಲಿಸಿದ ದಾವೆಗೆ ವಿಳಂಬ ಪಾವತಿಗೆ ಅನ್ವಯಿಸುವ ಬಡ್ಡಿಯನ್ನು ಪಾವತಿಸುವಂತೆ ಮಾನ್ಯ ನ್ಯಾಯಾಲಯದಲ್ಲಿ ಅಂತಿಮ ತೀರ್ಪನ್ನು ನೀಡಿರುತ್ತದೆ.

ಸದರಿ ತೀರ್ಪನ್ನು ಪ್ರಶ್ನಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಮೇರೆಗೆ ಮೇಲ್ಮನವಿ ಸಂಖ್ಯೆ:ಆರ್.ಎ63/2009 ರಂತೆ ಡಿಸ್ಟ್ರಿಕ್ ಜಡ್ಜ್ ನ್ಯಾಯಾಲಯ, ಚಿತ್ರದುರ್ಗದಲ್ಲಿ ಮೇಲ್ಮನವಿ ಸಲ್ಲಿಸಲಾಯಿತು. ಸದರಿ ಮೇಲ್ಮನವಿಯನ್ನು ಆಲಿಸಿದ ನ್ಯಾಯಾಲಯವು ಕೆಳಹಂತದ ನ್ಯಾಯಾಲಯವು ನೀಡಿದ ತೀರ್ಪನ್ನು ಎತ್ತಿ ಹಿಡಿದಿದೆ.

ಓದಲಾದ ಕ್ರಮ ಸಂಖ್ಯೆ (3)ರ ತೀರ್ಪಿನಂತೆ ಗಳಿಕೆ ರಜೆ ವಿಳಂಬ ಪಾವತಿಗೆ ದಿನಾಂಕ:01–10–1998 ರಿಂದ 20–08–2003 ರ ವರೆವಿಗೆ ಶೇ.12 ರಷ್ಟು ಬಡ್ಡಿ ದರ ಹಾಗೂ ದಿನಾಂಕ:21–08–2003 ರಿಂದ 04–08–2004 ರ ಅವಧಿಗೆ ಶೇ. 8ರಷ್ಟು ಬಡ್ಡಿ ದರವನ್ನು ಲೆಕ್ಕಾಚಾರ ಮಾಡಬೇಕಾಗಿರುತ್ತದೆ. ಪಿಂಚಣಿ ಉಪದಾನ ವಿಳಂಬಪಾವತಿಗೆ ದಿನಾಂಕ:16–09–1998 ರಿಂದ 20–08–2003 ರವರೆಗೆ ಶೇ. 12 ರಷ್ಟು ಬಡ್ಡಿದರ ಹಾಗೂ ದಿನಾಂಕ:21–08–2003 ರಿಂದ 04–08–2004ರ ಅವಧಿಗೆ ಶೇ. 8 ರಷ್ಟು ಬಡ್ಡಿದರ ಲೆಕ್ಕಾಚಾರ ಮಾಡಬೇಕಾಗಿರುತ್ತದೆ.

ಓದಲಾದ ಕ್ರಮ ಸಂಖ್ಯೆ: (4)ರಲ್ಲಿ ತಿಳಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಆಇ (ವಿಶೇಷ) 199 ಪಿಇಎನ್ 93, ದಿನಾಂಕ:13–09–1994 ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ/ವಿ/1/ಪಿಎಎನ್ 94 ದಿನಾಂಕ: 02–09–2004 ರನ್ವಯ ಪಿಂಚಣಿ ಉಪದನ ಮತ್ತು ಗಳಿಕೆ ರಜೆ ನಗದೀಕರಣ ಸೌಲಭ್ಯಗಳಿಗೆ ಬಡ್ಡಿಯನ್ನು ಪಾವತಿಸಲು ಓದಲಾದ ಕ್ರಮ ಸಂಖ್ಯೆ: (5)ರಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ನು ನೀಡಲಾಗಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಇಎನ್ 66 ಇಬಿಎಸ್ 2011 ದಿನಾಂಕ: 03–06–2014

ಸರ್ಕಾರವು ಶ್ರೀಮತಿ ಜೈನಾಬಿ ಕೋಂ.ದಿ:ಕೆ.ಬಾಬು ಡ್ರೈವರ್ ಇವರಿಗೆ ಪಿಂಚಣಿ ಮತ್ತು ಗಳಿಕೆ ರಜೆ ನಗದೀಕರಣ ಮೊತ್ತ ವಿಳಂಬ ಪಾವತಿಗೆ ಅನ್ವಯಿಸುವ ಬಡ್ಡಿ ಮೊತ್ತವನ್ನು Prl. Civil Judge (Sr-dvn) ಚಿತ್ರದುರ್ಗ ನ್ಯಾಯಾಲಯವು ನೀಡಿರುವ ಅಂತಿಮ ತೀರ್ಪಿನ ಮೇರೆಗೆ ಗಳಿಕೆ ರಜೆ ನಗದೀಕರಣ ವಿಳಂಬಪಾವತಿಗೆ ದಿನಾಂಕ:01-10-1998 ರಿಂದ 20-08-2003 ರ ವರೆವಿಗೆ ಶೇ.12 ರಷ್ಟು ಹಾಗೂ ದಿನಾಂಕ: 21-08-2003 ರಿಂದ 04-08-2004 ರ ಅವಧಿಗೆ ಶೇ.8 ರಷ್ಟು ಬಡ್ಡಿ ದರವನ್ನು ಮತ್ತು ಪಿಂಚಣಿ ಉಪದಾನ ವಿಳಂಬಪಾವತಿಗೆ ದಿನಾಂಕ:16-09-1998 ರಿಂದ 20-08-2003 ರವರೆಗೆ ಶೆ.12 ಹಾಗೂ ದಿನಾಂಕ: 21-08-2003 ರಿಂದ 04-08-2004ರ ಅವಧಿಗೆ ಶೇ.8 ರಷ್ಟು ಬಡ್ಡಿ ದರದಂತೆ **ಅನುಬಂಧ-1** ರಲ್ಲಿ ತಿಳಿಸಿರುವಂತೆ ಲೆಕ್ಕಾಚಾರ ಮಾಡಿ ಪಾವತಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಮೀರ್ ಮಡಿಮನ್

ಪೀಠಾಧಿಕಾರಿ,

ಇಂಧನ ಇಲಾಖೆ

ಅನುಬಂಧ-1

ಗಳಿಕೆ ರಜೆ ವಿಳಂಬ ಪಾವತಿಯ ಮೊತ್ತ ರೂ. 35,000/-		
ಅವಧಿ	**ಮೊತ್ತ**	**ಶೇ12% ರಂತೆ ಬಡ್ಡಿ ದರ**
01-10-1998 ರಿಂದ 31-07-2003	35,000/-	20300.00
01-08-2003 ರಿಂದ 20-08-2003	35,000/-	230.00
		ಶೇ.8 ರಂತೆ ಬಡ್ಡಿ ದರ
21-08-2003 ರಿಂದ 31-08-2004	35,000/-	84.38
01-09-2003 ರಿಂದ 31-07-2004	35,000/-	2566.67
01-08-2003 ರಿಂದ 04-08-2004	35,000/-	30.68
ಒಟ್ಟು		**23211.73**

ಪಿಂಚಣಿ ಉಪದಾನ ವಿಳಂಬ ಪಾವತಿಯ ಮೊತ್ತ ರೂ. 10,000/-		
ಅವಧಿ	**ಮೊತ್ತ**	**ಶೇ12% ರಂತೆ ಬಡ್ಡಿ ದರ**
16-09-1998 ರಿಂದ 30-09-1998	10,000/-	52.80
01-10-1998 ರಿಂದ 31-07-2003	10,000/-	5800
01-08-2003 ರಿಂದ 20-08-2003	10,000/-	65.75
		ಶೇ.8 ರಂತೆ ಬಡ್ಡಿ ದರ
21-08-2003 ರಿಂದ 31-08-2004	10,000/-	24.10
01-09-2003 ರಿಂದ 31-07-2004	10,000/-	733.33
01-08-2003 ರಿಂದ 04-08-2004	10,000/-	8.77
ಒಟ್ಟು		**6684.55**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಮೀರ್ ಮಡಿಮನ್

ಪೀಠಾಧಿಕಾರಿ,

ಇಂಧನ ಇಲಾಖೆ

PR-471
SC-50

ಆರ್ಥಿಕ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಆಇ 305 ರಾಲೆಪ 2013, ಬೆಂಗಳೂರು, ದಿನಾಂಕ: 21ನೇ ಮೇ, 2014

ವಿಷಯ : ಸಾರ್ವಜನಿಕ ಉದ್ಯೋಗದ ನೇಮಕಾತಿಗಳಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ಕಲ್ಪಿಸಿರುವ ಮೀಸಲಾತಿಯನ್ವಯ ರಾಜ್ಯ ಲೆಕ್ಕಪತ್ರ ಇಲಾಖೆಯ ಗ್ರೂಪ್–ಎ ಕಿರಿಯ ಶ್ರೇಣಿಯ ಸ್ಥಳೀಯ ವೃಂದಕ್ಕೆ ಹಂಚಿಕೆ ಹೊಂದಲು ಅಭಿಮತ ನೀಡುವ ಕುರಿತು.

ಉಲ್ಲೇಖ :
1) ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013, ದಿನಾಂಕ: 06–11–2013.
2) ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013.
3) ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು, 2013.
4) ಅಧಿಸೂಚನೆ ಸಂಖ್ಯೆ: ಆಇ 305 ರಾಲೆಪ 2013, ದಿನಾಂಕ: 15–04–2014.

ಉಲ್ಲೇಖ (1)ರ ದಿನಾಂಕ: 06–11–2013ರ ಆದೇಶದಲ್ಲಿ ಕರ್ನಾಟಕ ಸಾರ್ವಜನಿಕ ಉದ್ಯೋಗದ ನೇಮಕಾತಿಗಳಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಮೀಸಲಾತಿಯನ್ನು ಕಲ್ಪಿಸಿದೆ. ಸದರಿ ಆದೇಶದ 3 ಮತ್ತು 13ನೇ ಕಂಡಿಕೆಗಳಿಗೆ ಅನುಗುಣವಾಗಿ, ವೃಂದ ನಿಯಂತ್ರಣ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸ್ಥಳೀಯ ವೃಂದಗಳನ್ನು ರಚಿಸಿ, ಪ್ರತಿಯೊಂದು ವೃಂದಗಳಲ್ಲಿನ ಹುದ್ದೆಗಳ ಸಂಖ್ಯೆಯನ್ನು ಗುರುತಿಸತಕ್ಕದ್ದಾಗಿದೆ. ಮುಂದುವರೆದು, ಈ ರೀತಿ ಗುರುತಿಸಲಾದ ಸ್ಥಳೀಯ ವೃಂದದಲ್ಲಿನ ಹುದ್ದೆಗಳನ್ನು ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅನುಗುಣವಾಗಿ ಮುಂಬಡ್ತಿ ಅಥವಾ ನೇರ ನೇಮಕಾತಿಯಡಿ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದಾಗಿದೆ. ಈ ಬಗ್ಗೆ ಉಲ್ಲೇಖಿತ (2) ಮತ್ತು (3)ರಲ್ಲಿನ ನಿಯಮಗಳನ್ನೂ ಸಹ ಸರ್ಕಾರವು ರಚಿಸಿರುತ್ತದೆ.

2. ಮೇಲೆ ತಿಳಿಸಿದ ಆದೇಶ ಮತ್ತು ನಿಯಮಗಳನುಸಾರ, ರಾಜ್ಯ ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರು (ಗ್ರೂಪ್–ಎ ಕಿರಿಯ ಶ್ರೇಣಿ) ವೃಂದದಲ್ಲಿ ಸ್ಥಳೀಯ ವೃಂದವನ್ನು ಮೇಲೆ ಉಲ್ಲೇಖ (4)ರ ಅಧಿಸೂಚನೆಯಲ್ಲಿ ರಚಿಸಲಾಗಿರುತ್ತದೆ.

3. ಉಲ್ಲೇಖ (1)ರ ಆದೇಶ ದಿನಾಂಕ: 06–11–2013ರಲ್ಲಿ **"ಸ್ಥಳೀಯ ವೃಂದ"** ಹಾಗೂ **"ಸ್ಥಳೀಯ ವ್ಯಕ್ತಿ"** ಎಂಬುದನ್ನು ಈಗಾಗಲೇ ವ್ಯಾಖ್ಯಾನಿಸಲಾಗಿದೆ. ಮುಂದುವರೆದು, ಸದರಿ ಆದೇಶದ ಕಂಡಿಕೆ–4ರ ಉಪ ಕಂಡಿಕೆ (2)ರ ಪ್ರಕಾರ ಹೈದರಾಬಾದ್–ಕರ್ನಾಟಕ ಪ್ರದೇಶದ ಅಧಿಕಾರಿಗಳಿಂದ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಅಭಿಮತ ನೀಡಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಉಲ್ಲೇಖಿತ (2)ರ ನಿಯಮಗಳ ನಿಯಮ 6ರ ಉಪ ನಿಯಮ (1)ರ ಪ್ರಕಾರ ಪ್ರಸ್ತುತ ಸೇವೆಯಲ್ಲಿರುವ ಅಧಿಕಾರಿಗಳು ಸ್ಥಳೀಯ ವ್ಯಕ್ತಿಗಳ ಮಾನದಂಡವನ್ನು ಪೂರೈಸುವ ನಿಗದಿತ ನಮೂನೆಗಳಲ್ಲಿನ ಅರ್ಹತಾ ಪ್ರಮಾಣ ಪತ್ರದೊಂದಿಗೆ ಸ್ಥಳೀಯ ವೃಂದವನ್ನು ಸೇರಲು 30 ದಿನಗಳೊಳಗಾಗಿ ತಮ್ಮ ಆಯ್ಕೆಯನ್ನು ಅಭಿಮತದ ಮೂಲಕ ಚಲಾಯಿಸಲು ಈ ಮೂಲಕ ಅವಕಾಶ ಕಲ್ಪಿಸಲಾಗಿದೆ.

4. ತತ್ಸಂಬಂಧ ಮೇಲಿನ ಉಲ್ಲೇಖ (3)ರಲ್ಲಿನ ನಿಯಮಗಳಲ್ಲಿ **"ಸ್ಥಳೀಯ ವ್ಯಕ್ತಿ"** ಎಂಬ ಮೀಸಲಾತಿಯನ್ನು ಕ್ಲೈಮ್ ಮಾಡುವ ಸಂಬಂಧ ಆರು ವಿವಿಧ ಪ್ರಮಾಣ ಪತ್ರಗಳನ್ನು ಆಧಾರವಾಗಿ ಗುರುತಿಸಲಾಗಿದೆ. ಈ ಪೈಕಿ ಹಾಲಿ ಸೇವೆಯಲ್ಲಿರುವ ಅಧಿಕಾರಿ/ನೌಕರರು ಸೇವಾ ಪುಸ್ತಕದಲ್ಲಿ ನಮೂದಿಸಲಾಗಿರುವ ಸ್ವಗ್ರಾಮ ಅಥವಾ ಸ್ಥಳದ ಆಧಾರದ ಮೇಲೆ ನಿಗದಿತ ನಮೂನೆಯಲ್ಲಿ ಸ್ವಗ್ರಾಮ ಪ್ರಮಾಣ ಪತ್ರ ಪಡೆದಿದ್ದಲ್ಲಿ ಪುನ: ಈ ನಿಯಮಗಳ ನಿಯಮ 3ರಡಿ ನಿರ್ದಿಷ್ಟಪಡಿಸಿರುವ ರೀತ್ಯ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವುದು ಅಗತ್ಯವಿರುವುದಿಲ್ಲ. ಉಳಿದ 5 ಪ್ರಮಾಣ ಪತ್ರಗಳ ಸಂಬಂಧ ಸಕ್ಷಮ ಪ್ರಾಧಿಕಾರವು ನೀಡುವ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಸದರಿ 5 ಪ್ರಮಾಣ ಪತ್ರಗಳ ನಮೂನೆಯ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ.

5. ಈ ಹಿನ್ನೆಲೆಯಲ್ಲಿ, ರಾಜ್ಯ ಲೆಕ್ಕಪತ್ರ ಇಲಾಖೆಯ ವ್ಯಾಪ್ತಿಯಡಿ ಬರುವ ನಿಯಂತ್ರಕರ ವೃಂದದಲ್ಲಿನ ಅಧಿಕಾರಿಗಳು ಸ್ಥಳೀಯ ವೃಂದಕ್ಕೆ ಆಯ್ಕೆ ಮಾಡುವ ಕುರಿತು ಅಭಿಮತವನ್ನು ಈ ಸುತ್ತೋಲೆಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ಅಂದರೆ ದಿನಾಂಕ: 20.06.2014 ರೊಳಗೆ ರಾಜ್ಯ ಲೆಕ್ಕಪತ್ರ ಇಲಾಖೆ ನಿಯಂತ್ರಕರ ಮೂಲಕ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯೊಳಗೆ ಅಧಿಕಾರಿಗಳು ತಮ್ಮ ಆಯ್ಕೆಯನ್ನು ಚಲಾಯಿಸದಿದ್ದಲ್ಲಿ, ಉಲ್ಲೇಖ (2)ರ ನಿಯಮಗಳ ನಿಯಮ 6(1)ರ ಅನುಸಾರ, ಅವರು ಸ್ಥಳೀಯ ವೃಂದವನ್ನು ಸೇರಲು ಇಚ್ಛೆ ಹೊಂದಿಲ್ಲವೆಂದು ಪರಿಗಣಿಸಲಾಗುವುದು.

6. ನಿಯಂತ್ರಕರು ರಾಜ್ಯ ಲೆಕ್ಕಪತ್ರ ಇಲಾಖೆ ಇವರು ಇಲಾಖೆಯ ಸಹಾಯಕ ನಿಯಂತ್ರಕರ ವೃಂದದ ಅಧಿಕಾರಿಗಳಿಗೆ ಈ ಸುತ್ತೋಲೆಯನ್ನು ಗಮನಕ್ಕೆ ತರಲು ಕೋರಿದೆ.

ಎನ್. ಲಕ್ಷ್ಮಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ
(ಆಡಳಿತ & ಮುಂಗಡ)

ಅನುಬಂಧ–ಎ

ಸ್ವಗ್ರಾಮ ಪ್ರಮಾಣಪತ್ರ

[ಅನುಚ್ಛೇದ 371(ಜೆ) ಮೇರೆಗೆ]

(5 (2)ನೇ ನಿಯಮ ನೋಡಿ)

[ಪ್ರಮಾಣಪತ್ರಗಳ ನೀಡಿಕೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ಶ್ರೀಮತಿ ________________ ರವರು ________________ ರವರ ಮಗ/ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ________________ ಜಿಲ್ಲೆಯ ________________ತಾಲ್ಲೂಕಿನ, ________________ ಗ್ರಾಮ/ಪಟ್ಟಣವನ್ನು ತನ್ನ ಸೇವಾ ಪುಸ್ತಕದಲ್ಲಿ ತನ್ನ ಸ್ವಗ್ರಾಮ/ಸ್ಥಳ ಎಂದು ಘೋಷಿಸಿರುತ್ತಾರೆ.

ಸೇವಾ ಪುಸ್ತಕದಲ್ಲಿರುವ ನಮೂದನ್ನು ನಾನು ಖುದ್ದಾಗಿ ಪರಿಶೀಲಿಸಿದ್ದೇನೆ ಮತ್ತು ಮೇಲಿನ ನಮೂದು 01–01–2013ಕ್ಕೆ ಮುಂಚೆ ಸೇವಾ ಪುಸ್ತಕದಲ್ಲಿ ಇತ್ತೆಂದು ಸ್ವತಃ ಮನವರಿಕೆ ಮಾಡಿಕೊಂಡಿರುತ್ತೇನೆ.

ಸ್ಥಳ : ________________

ದಿನಾಂಕ : ________________

ಹೆಸರು ________________

ಪದನಾಮ ________________

ಕಛೇರಿ ________________

ಇಲಾಖೆ ________________

ಅನುಬಂಧ–ಬಿ

ಅರ್ಹತಾ ಪ್ರಮಾಣಪತ್ರ

[ಅನುಚ್ಛೇದ 371(ಜೆ) ಮೇರೆಗೆ]

(5 (3)ನೇ ನಿಯಮ ನೋಡಿ)

[ಪ್ರಮಾಣಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ಶ್ರೀಮತಿ ________________ ರವರು ________________ ರವರ

ಮಗ/ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ________________ ಜಿಲ್ಲೆಯ ________________ತಾಲ್ಲೂಕಿನ

________________ ಗ್ರಾಮ/ಪಟ್ಟಣದ ಒಬ್ಬ ಸ್ಥಳೀಯ ವ್ಯಕ್ತಿಯಾಗಿರುತ್ತಾರೆ.

ಸ್ಥಳ : ________________

ದಿನಾಂಕ : ________________

ಹೆಸರು ________________

ಅಸಿಸ್ಟೆಂಟ್ ಕಮೀಷನರ್

________________ ಉಪ ವಿಭಾಗ

________________ ಜಿಲ್ಲೆ

ಅನುಬಂಧ–ಸಿ

ಸ್ಥಳೀಯ ವೃಂದದ ಸೇರಿಕೆಗಾಗಿ ಅರ್ಜಿ

(371(ಜೆ) ಅನುಚ್ಛೇದ ಮೇರೆಗೆ)

(6ನೇ ನಿಯಮ ನೋಡಿ)

[ಸ್ಥಳೀಯ ರಚನೆ, ವೃಂದಗಳು, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗದಲ್ಲಿ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

1. ಸ್ಥಳೀಯ ವೃಂದದ ಹೆಸರು : ______________________
2. ಇಲಾಖೆ : ______________________
3. ಜಿಲ್ಲೆ (ಸಂಬಂಧಿಸಿದ್ದರೆ) : ______________________
4. ಅರ್ಜಿದಾರನ ಹೆಸರು : ______________________
5. ಪ್ರಸ್ತುತ ಹುದ್ದೆಯಲ್ಲಿರುವ ಸ್ಥಳ : ______________________
6. ಹುದ್ದೆಯ ಹೆಸರು (ಪದನಾಮ) : ______________________

ನಾನು ಈ ಮೇಲೆ ಹೇಳಿದ ವೃಂದವನ್ನು ಸೇರಲು ಇಚ್ಛಿಸುವುದಾಗಿ ಮನವಿ ಮಾಡುತ್ತೇನೆ. ನಾನು ಸ್ಥಳೀಯ ವ್ಯಕ್ತಿಯಾಗಿದ್ದು, ನನ್ನ ಕ್ಲೇಮಿನ ರುಜುವಾತಾಗಿ ನನ್ನ ಸ್ವಗ್ರಾಮ/ಅರ್ಹತಾ ಪ್ರಮಾಣ ಪತ್ರವನ್ನು ಈ ಮೂಲಕ ಲಗತ್ತಿಸಿದ್ದೇನೆ.

ಸ್ಥಳ : ________________

ದಿನಾಂಕ : ________________

ಹೆಸರು ______________________

ವಿಳಾಸ ______________________

____

____

ಮೊಬೈಲ್ ಸಂಖ್ಯೆ ______________________

ಅನುಬಂಧ–ಎ

ಅರ್ಹತಾ ಪ್ರಮಾಣಪತ್ರ

[ಅನುಚ್ಛೇದ 371 (ಜೆ) ಮೇರೆಗೆ]

(3 (3)ನೇ ನಿಯಮ ನೋಡಿ)

[ಪ್ರಮಾಣಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ಶ್ರೀಮತಿ ______________________ ರವರು ______________________ ರವರ ಮಗ/ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ______________________ ಜಿಲ್ಲೆಯ ______________________ತಾಲ್ಲೂಕಿನ ______________________ ಗ್ರಾಮ/ಪಟ್ಟಣದ ಸ್ಥಳೀಯ ವ್ಯಕ್ತಿಯಾಗಿದ್ದಾರೆ.

ಸ್ಥಳ : ________________

ದಿನಾಂಕ : ________________

ಹೆಸರು ______________________

ಅಸಿಸ್ಟೆಂಟ್ ಕಮೀಷನರ್

______________________ ಉಪ ವಿಭಾಗ

______________________ ಜಿಲ್ಲೆ

ಅನುಬಂಧ–ಬಿ

ವಾಸಸ್ಥಳ ಪ್ರಮಾಣಪತ್ರ

[ಅನುಚ್ಛೇದ 371 (ಜೆ) ಮೇರೆಗೆ]

(ನಿಯಮ 4 (ಬಿ) (2) (iii) ನೋಡಿ)

[ಪ್ರಮಾಣಪತ್ರಗಳ ನೀಡಿಕೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ಶ್ರೀಮತಿ ______________________ ರವರು ______________________ ರವರ ಮಗ/ಹೆಂಡತಿಯಾಗಿದ್ದು, ಇವರು ______________________ ಜಿಲ್ಲೆಯ ______________________ತಾಲ್ಲೂಕಿನ ______________________ ಗ್ರಾಮ/ಪಟ್ಟಣದ ಈ ಕೆಳಕಂಡ ವಿಳಾಸದಲ್ಲಿ ಕೆಳಗೆ ಸೂಚಿಸಿರುವ ಅವಧಿಯಲ್ಲಿ ವಾಸವಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಕ್ರ.ಸಂ.	ವಿಳಾಸ	ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ	ಸಾಕ್ಷ್ಯ ವಿವರ (ಆಧಾರವಾಗಿಟ್ಟುಕೊಂಡಿರುವ ಸಾಕ್ಷ್ಯದ ಎಲ್ಲಾ ಪ್ರಮಾಣೀಕೃತ ಪ್ರತಿಗಳನ್ನು ಲಗತ್ತಿಸಿ)
1			
2			
3			
4			
5			
6			

ಸಾಕ್ಷ್ಯದಲ್ಲಿ ಹೇಳಲಾದ ಎಲ್ಲಾ ಲಗತ್ತುಗಳನ್ನು ಕೋಷ್ಟಕದಲ್ಲಿ ಸಂಕ್ಷಿಪ್ತವಾಗಿ ಅಳವಡಿಸಿ.

ಸ್ಥಳ : ______________________

ದಿನಾಂಕ : ______________________

ಹೆಸರು ______________________

ತಹಸೀಲ್ದಾರ್ ______________________

______________________ ತಾಲ್ಲೂಕು

______________________ ಜಿಲ್ಲೆ

ಅನುಬಂಧ–ಸಿ

ವ್ಯಾಸಂಗ ಪ್ರಮಾಣಪತ್ರ

[ಅನುಚ್ಛೇದ 371 (ಜೆ) ಮೇರೆಗೆ]

(ನಿಯಮ 4 (ಸಿ) (2) (ii) ನೋಡಿ)

[ಪ್ರಮಾಣಪತ್ರಗಳ ನೀಡಿಕೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ಶ್ರೀಮತಿ ______________________ ರವರು ______________________ ರವರ

ಮಗ/ಹೆಂಡತಿಯಾಗಿದ್ದು, ಇವರು ______________ ಜಿಲ್ಲೆಯ ______________ತಾಲ್ಲೂಕಿನ ______________

ಕಾಲೇಜು/ಶಾಲೆಯಲ್ಲಿ ಈ ಕೆಳಗೆ ಸೂಚಿಸಲಾದ ಅವಧಿಯಲ್ಲಿ ವ್ಯಾಸಂಗ ಮಾಡಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಕ್ರ.ಸಂ.	ತರಗತಿ/ಹಂತ	ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ	ದಾಖಲೆಯ ಉಲ್ಲೇಖ

ಇವನು ಈ ಕೆಳಕಂಡ ವರ್ಷಗಳಲ್ಲಿ ಈ ಕೆಳಕಂಡ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿದ್ದಾನೆ/ಅನುತ್ತೀರ್ಣನಾಗಿದ್ದಾನೆ.

ಕ್ರ.ಸಂ.	ತರಗತಿ/ಪರೀಕ್ಷೆ/ಹಂತದ ಹೆಸರು	ವರ್ಷ	ಅನುತ್ತೀರ್ಣ/ಉತ್ತೀರ್ಣ	ದಾಖಲೆಯ ಉಲ್ಲೇಖ

ಸ್ಥಳ : ______________ ಹೆಸರು ______________________

ದಿನಾಂಕ : ______________ ಸಂಸ್ಥೆಯ ಮುಖ್ಯಸ್ಥರು

ಪ್ರಮಾಣಪತ್ರ

ಮೇಲೆ ನೀಡಲಾದ ಪ್ರಮಾಣಪತ್ರವು ಲಭ್ಯವಿರುವ ದಾಖಲೆಯ ಪ್ರಕಾರ ಸತ್ಯವಾಗಿದೆ ಎಂಬುದನ್ನು ನಾನು ಸ್ವತಃ ಮನವರಿಕೆ ಮಾಡಿಕೊಂಡಿದ್ದೇನೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ______________ ಹೆಸರು ______________________

ದಿನಾಂಕ : ______________ ಕ್ಷೇತ್ರ ಶಿಕ್ಷಣಾಧಿಕಾರಿ ______________

______________________ ತಾಲ್ಲೂಕು

______________________ ಜಿಲ್ಲೆ

ಅನುಬಂಧ–ಡಿ

ಸ್ವಗ್ರಾಮ ಪ್ರಮಾಣಪತ್ರ

(Home Town Certificate)

[ಅನುಚ್ಛೇದ 371 (ಜೆ) ಮೇರೆಗೆ]

(4(ಇ) ನಿಯಮ ನೋಡಿ)

[ಪ್ರಮಾಣಪತ್ರಗಳ ನೀಡಿಕೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ಶ್ರೀಮತಿ ____________________ ರವರು ____________________ ರವರ ಮಗ/ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ____________________ ಜಿಲ್ಲೆಯ ____________________ತಾಲ್ಲೂಕಿನ, ____________________ ಗ್ರಾಮ/ಪಟ್ಟಣವನ್ನು ತನ್ನ ಸ್ವಗ್ರಾಮ/ಸ್ಥಳ ಎಂದು ತನ್ನ ಸೇವಾ ಪುಸ್ತಕದಲ್ಲಿ ಘೋಷಿಸಿರುತ್ತಾರೆ.

ಸೇವಾ ಪುಸ್ತಕದಲ್ಲಿರುವ ನಮೂದನ್ನು ನಾನು ಖುದ್ದಾಗಿ ಪರಿಶೀಲಿಸಿದ್ದೇನೆ ಮತ್ತು ಮೇಲಿನ ನಮೂದು 01–01–2013ಕ್ಕೆ ಮುಂಚೆ ಸೇವಾ ಪುಸ್ತಕದಲ್ಲಿ ನಮೂದು ಮಾಡಲಾಗಿತ್ತೆಂದು ಸ್ವತಃ ಮನವರಿಕೆ ಮಾಡಿಕೊಂಡಿರುತ್ತೇನೆ.

ಸ್ಥಳ : ____________________

ದಿನಾಂಕ : ____________________

ಹೆಸರು ____________________

ಪದನಾಮ ____________________

ಕಛೇರಿ ____________________

ಇಲಾಖೆ ____________________

ಅನುಬಂಧ–ಇ

ಸಿಂಧುತ್ವ ಪ್ರಮಾಣಪತ್ರ

[ಅನುಚ್ಛೇದ 371 (ಜೆ) ಮೇರೆಗೆ]

(ನಿಯಮ 6(3)ನೋಡಿ)

[ಪ್ರಮಾಣಪತ್ರಗಳ ನೀಡಿಕೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ಶ್ರೀಮತಿ ____________________ ರವರು ____________________ ರವರ ಮಗ/ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ____________________ ಜಿಲ್ಲೆಯ ____________________ತಾಲ್ಲೂಕಿನ, ____________________ ಗ್ರಾಮ/ಪಟ್ಟಣದ ಸ್ಥಳೀಯ ವ್ಯಕ್ತಿಯಾಗಿರುತ್ತಾರೆ.

ನಾವು ಅರ್ಹತಾ ಪ್ರಮಾಣಪತ್ರದ ಸರಿತನವನ್ನು ಪರಿಶೀಲಿಸಿದ್ದೇವೆ ಹಾಗೂ ಅದನ್ನು ಮಾನ್ಯ ಮಾಡಿದ್ದೇವೆ.

ಸ್ಥಳ : ____________________

ದಿನಾಂಕ : ____________________

ಹೆಸರು ____________________

ಜಿಲ್ಲಾಧಿಕಾರಿ ____________________

____________________ ಜಿಲ್ಲೆ

ಹೆಸರು ____________________

ಸೂಪರಿಂಟೆಂಡೆಂಟ್ ಆಫ್ ಪೊಲೀಸ್

____________________ ಜಿಲ್ಲೆ

ಹೆಸರು ____________________

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್

____________________ ಜಿಲ್ಲೆ

ಎನ್. ಲಕ್ಷ್ಮಣ,

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ

(ಆಡಳಿತ & ಮುಂಗಡ)

P.R. 479

SC 100

ತೋಟಗಾರಿಕೆ ಸಚಿವಾಲಯ

ವಿಷಯ: ಶ್ರೀ ವಿ.ರಾಘವೇಂದ್ರ ಸಹಾಯಕ ತೋಟಗಾರಿಕೆ ಅಧಿಕಾರಿ, ಪ್ರಸ್ತುತ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ಮಾರುಕಟ್ಟೆ) ಲಾಲ್‌ಬಾಗ್, ಬೆಂಗಳೂರು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ : 1. ಉಪ ನಿಬಂಧಕರು, ವಿಚಾರಣೆ–I, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ: D.O. Compt/uplok/BD-68/2014/DRE-1 ದಿ: 10–04–2014.

2. ಸರ್ಕಾರದ ಆದೇಶ ಸಂಖ್ಯೆ:ತೋಇ 437 ತೋಸೇಪ 2013, ದಿನಾಂಕ:24.01.2014.

ಪ್ರಸ್ತಾವನೆ:

ಮೇಲೆ ಕ್ರ.ಸಂ: 1ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ವಿ.ರಾಘವೇಂದ್ರ ಸಹಾಯಕ ತೋಟಗಾರಿಕೆ ಅಧಿಕಾರಿ, ಪ್ರಸ್ತುತ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ಮಾರುಕಟ್ಟೆ) ಲಾಲ್‌ಬಾಗ್, ಬೆಂಗಳೂರು ಇವರು ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಗೌರಿಬಿದನೂರು ತಾಲ್ಲೂಕು, ಓ.ಓ.ಡಿ. ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವದಿಯಲ್ಲಿ ಫಿರ್ಯಾದಿದಾರರಾದ ಶ್ರೀ ಎನ್.ಅಂಬರೀಷ್, ಅಜ್ಜಕದಿರೇನಹಳ್ಳಿ ಗ್ರಾಮ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಅಜ್ಜಕದಿರೇನಹಳ್ಳಿ ಗ್ರಾಮದಲ್ಲಿ ತಮ್ಮ ತಂದೆಯವರು ಸರ್ವೆ ನಂ.70ರಲ್ಲಿ ಹೊಂದಿರುವ 3 ಎಕರೆ ಜಮೀನಿನಲ್ಲಿ ಬೆಳೆಸಿರುವ ದ್ರಾಕ್ಷಿ ಬೆಳೆಗೆ ಸ್ವಂತ ಖರ್ಚಿನಿಂದ ಹನಿನೀರಾವರಿ ಅಳವಡಿಸಿರುವುದಕ್ಕೆ ಇಲಾಖೆ ವತಿಯಿಂದ ಸಹಾಯ ಧನ ಬಿಡುಗಡೆ ಮಾಡುವುದಕ್ಕಾಗಿ ರೂ. 1,700/–ಗಳ ಅಕ್ರಮ ಸಂಭಾವನೆಯನ್ನು ಆಗ್ರಹಿಸಿದ್ದಾರೆಂದು ದೂರು ನೀಡಿದ್ದ ಹಿನ್ನೆಲೆಯಲ್ಲಿ ಅಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ದಿ: 28–05–2013ರಂದು ಟ್ರ್ಯಾಪ್ ಮಾಡಿದ್ದು, ಈ ಬಗ್ಗೆ ಅಧಿಕಾರಿಗೆ ವಿಚಾರಣೆ ಕೈಗೊಳ್ಳುವ ಸಂಬಂಧ ಲೋಕಯುಕ್ತವು ದಿ:22–01–2014ರಂದು ಕಾರಣ ಕೇಳುವ ನೊಟೀಸು ನೀಡಿದ್ದು, ಈ ಕಾರಣ ಕೇಳುವ ನೋಟೀಸಿಗೆ ಅಧಿಕಾರಿಯು ತನಿಖಾ ವರದಿಯಲ್ಲಿ ಕಾಣಿಸಿದ ಸಂಗತಿಗಳನ್ನು ನಿರಾಕರಿಸಿ ತಮ್ಮ ವಿರುದ್ಧದ ತನಿಖೆಯನ್ನು ಮುಕ್ತಾಯಗೊಳಿಸಬೇಕೆಂದು ದಿ:17–02–2014ರ ಪತ್ರದಲ್ಲಿ ಕೋರಿದ್ದಾರೆ. ಆದರೆ ಅಧಿಕಾರಿಯು ತಮ್ಮ ಆಕ್ಷೇಪಣೆಯಲ್ಲಿ ನೀಡಿದ ಕಾರಣಗಳು ಸೂಕ್ತ ಹಾಗೂ ಸಮಾಧಾನಕರವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ಸದರಿಯವರ ವಿರುದ್ಧದ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬಂದಿದ್ದು, ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 3(1)ನ್ನು ಉಲ್ಲಂಘಿಸಿರುವುದರಿಂದ ಅಧಿಕಾರಿಯ ವಿರುದ್ಧ ಕರ್ನಾಟಕ ನಾಗರೀಕ ಸೇವಾ(ಸಿಸಿಎ) ನಿಯಮ 14 (ಎ) ರನ್ವಯ ಇಲಾಖಾ ವಿಚಾರಣೆ ನಡೆಸಲು ಆದೇಶ ಹೊರಡಿಸುವಂತೆ ಉಪ ನಿಬಂಧಕರು, ಕರ್ನಾಟಕ ಲೋಕಯುಕ್ತರವರು ಕೋರಿರುತ್ತಾರೆ.

ಕ್ರ.ಸಂ:2ರಲ್ಲಿ ಓದಲಾದ ಆದೇಶದಲ್ಲಿ ಅಧಿಕಾರಿಯು ಲಂಚಕ್ಕಾಗಿ ಆಗ್ರಹಿಸಿದಾಗ ಲೋಕಯುಕ್ತ ಪೊಲೀಸರಿಂದ ಟ್ರ್ಯಾಪ್ ಆಗಿದ್ದ ಕಾರಣ, ಅಧಿಕಾರಿಯನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ತೋಇ 437 ತೋಸೇಪ 2013, ಬೆಂಗಳೂರು, ದಿನಾಂಕ:04–06–2014

ಶ್ರೀ ವಿ. ರಾಘವೇಂದ್ರ, ಸಹಾಯಕ ತೋಟಗಾರಿಕೆ ಅಧಿಕಾರಿ, ಪ್ರಸ್ತುತ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ಮಾರುಕಟ್ಟೆ) ಲಾಲ್‌ಬಾಗ್, ಬೆಂಗಳೂರು ಇವರು ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಗೌರಿಬಿದನೂರು ತಾಲ್ಲೂಕು, ಓ.ಓ.ಡಿ. ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿನ ಮೇಲ್ಕಂಡ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖೆ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮ 14(ಎ)ರನ್ವಯ ನಡೆಸಲು ಪ್ರಕರಣವನ್ನು ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ತೋಟಗಾರಿಕೆ ಇಲಾಖೆ

P.R. 451
S.C. 25

ತೋಟಗಾರಿಕೆ ಸಚಿವಾಲಯ

ವಿಷಯ: ರಾಮನಗರ ಜಿಲ್ಲೆಯಲ್ಲಿ ರಸಗೊಬ್ಬರ ದಾಸ್ತಾನು ಮಾಡಲು ಉಗ್ರಾಣ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಮತ್ತು ಮಣ್ಣು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ರೇಷ್ಮೆ ತರಬೇತಿ ಕೇಂದ್ರ ರೇಷ್ಮೆ ಇಲಾಖೆ, ಚನ್ನಪಟ್ಟಣದ ಇಲಾಖೆಗೆ ಸೇರಿದ 3 ಎಕರೆ ಜಮೀನನ್ನು ಕೃಷಿ ಇಲಾಖೆಗೆ ಹಸ್ತಾಂತರಿಸುವ ಕುರಿತು.

ಓದಲಾಗಿದೆ : ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಇವರ ಪತ್ರ ಸಂಖ್ಯೆ: ರೇನಿ/ತಾಂ3(6)/ರಾ.ನ.ಉಗ್ರಾಣ/104/2011-12, ದಿನಾಂಕ: 10–04–2012.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 10–04–2012 ರ ಪತ್ರದಲ್ಲಿ ರಾಮನಗರ ಜಿಲ್ಲೆ ಇವರು ರಾಮನಗರ ಜಿಲ್ಲೆಯು ಹೊಸದಾಗಿ ಅಸ್ತಿತ್ವಕ್ಕೆ ಬಂದಿದ್ದು, ರೈತರ ಅಭಿವೃದ್ಧಿಗಾಗಿ ಜಿಲ್ಲಾ ರೈತ ತರಬೇತಿ ಕೇಂದ್ರ ಹಾಗೂ ಮಣ್ಣು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಅನುಮೋದನೆ ದೊರಕಿರುವುದಾಗಿ

ತಿಳಿಸಿ ಇದಕ್ಕಾಗಿ 3 ಎಕರೆ ಪ್ರದೇಶವನ್ನು ಹಾಗೂ ಸುವ್ಯವಸ್ಥಿತ ಉಗ್ರಾಣ ನಿರ್ಮಾಣಕ್ಕಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಇವರು ಸೂಕ್ತ ಸ್ಥಳದ ಪರಿಶೀಲನೆ ನಡೆಸಿ ಅಂತಿಮವಾಗಿ ರೇಷ್ಮೆ ಇಲಾಖೆಯ ರೇಷ್ಮೆ ತರಬೇತಿ ಕೇಂದ್ರ, ಚನ್ನಪಟ್ಟಣಕ್ಕೆ ಸೇರಿದ ಬಳಕೆ ಆಗದೆ ಇರುವ ಪ್ರದೇಶದಲ್ಲಿ 1 ಎಕರೆ ಜಮೀನನ್ನು ಗುರುತಿಸಿರುವುದಾಗಿ ತಿಳಿಸಿ, ಈ ಬಗ್ಗೆ ಆದೇಶ ಹೊರಡಿಸುವಂತೆ ಕೃಷಿ ಆಯುಕ್ತರು ಕೋರಿರುವುದಾಗಿ ರೇಷ್ಮೆ ಆಯುಕ್ತರು ತಿಳಿಸಿರುತ್ತಾರೆ.

ಬೆಂಗಳೂರು-ಮೈಸೂರು ಹೆದ್ದಾರಿಯ ಪಕ್ಕದಲ್ಲಿ ರೈಲ್ವೆ ಟ್ರ್ಯಾಕ್‌ಗೆ ಹೊಂದಿಕೊಂಡಂತೆ ಚನ್ನಪಟ್ಟಣ ರೇಷ್ಮೆ ತರಬೇತಿ ಸಂಸ್ಥೆಯ ಜಮೀನಿನಲ್ಲಿ ರೇಷ್ಮೆ ಇಲಾಖೆಯ ಯಾವುದೇ ಕಾರ್ಯ ಚಟುವಟಿಕೆಗಳು ನಡೆಯುತ್ತಿಲ್ಲವಾದ್ದರಿಂದ ರೈತರ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕೃಷಿ ಇಲಾಖೆಗೆ ಹಾಗೂ ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ, ಸರ್ವೆ ನಂ. 11 ರಲ್ಲಿ 1.32 ಎಕರೆ, ಸರ್ವೆ ನಂ. 16 ರಲ್ಲಿ 1.08, ಹೀಗೆ ಒಟ್ಟು 3.00 ಎಕರೆ ಜಮೀನನ್ನು ಹಸ್ತಾಂತರಿಸಬಹುದೆಂದು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಪರೀಶಿಲಿಸಲಾಗಿದ್ದು, ಬೆಂಗಳೂರು-ಮೈಸೂರು ಹೆದ್ದಾರಿಯ ಪಕ್ಕದಲ್ಲಿ ರೈಲ್ವೆ ಟ್ರ್ಯಾಕ್‌ಗೆ ಹೊಂದಿಕೊಂಡಂತೆ ಚನ್ನಪಟ್ಟಣ ರೇಷ್ಮೆ ತರಬೇತಿ ಸಂಸ್ಥೆಯ ರೇಷ್ಮೆ ಇಲಾಖೆಗೆ ಸೇರಿದ ಸರ್ವೆ ನಂ.11 ರಲ್ಲಿ 1.32 ಎಕರೆ, ಸರ್ವೆ ನಂ. 16 ರಲ್ಲಿ 1.08, ಒಟ್ಟು 3.00 ಎಕರೆ ಜಮೀನನ್ನು ಕೃಷಿ ಇಲಾಖೆಗೆ ಹಸ್ತಾಂತರಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

ಸರ್ಕಾರಿ ಆದೇಶ ಸಂ: ತೋಇ 10 ರೇಯೋವಿ 2012, ಬೆಂಗಳೂರು, ದಿನಾಂಕ: 21-04-2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, ಬೆಂಗಳೂರು-ಮೈಸೂರು ಹೆದ್ದಾರಿಯ ಪಕ್ಕದಲ್ಲಿ ರೈಲ್ವೆ ಟ್ರ್ಯಾಕ್‌ಗೆ ಹೊಂದಿಕೊಂಡಂತೆ ಇರುವ ಚನ್ನಪಟ್ಟಣ ರೇಷ್ಮೆ ತರಬೇತಿ ಸಂಸ್ಥೆ, ರೇಷ್ಮೆ ಇಲಾಖೆಗೆ ಸೇರಿದ ಸರ್ವೆ ನಂ. 11 ರಲ್ಲಿ 1.32 ಎಕರೆ (ಒಂದು ಎಕರೆ 32 ಗುಂಟೆ), ಸರ್ವೆ ನಂ. 16 ರಲ್ಲಿ 1.08 ಎಕರೆ (1 ಎಕರೆ .08 ಗುಂಟೆ), ಒಟ್ಟು 3.00 (ಮೂರು) ಎಕರೆ ಜಮೀನನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮ ವತಿಯಿಂದ ಉಗ್ರಾಣ ನಿರ್ಮಿಸಲು ಹಾಗೂ ಕೃಷಿ ಇಲಾಖಾ ವತಿಯಿಂದ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಮತ್ತು ಮಣ್ಣು ಆರೋಗ್ಯ ಕೇಂದ್ರ ಸ್ಥಾಪಿಸಲು ಕೃಷಿ ಇಲಾಖೆಗೆ ಈ ಆದೇಶ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಹಸ್ತಾಂತರಿಸಲು ಸರ್ಕಾರವು ಆದೇಶಿದೆ.

ಈ ಆದೇಶವನ್ನು ಕಂದಾಯ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಕಂಇ 651 ಎಲ್‌ಜಿಬಿ 2012, ದಿನಾಂಕ: 30-01/27-03-2014 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 452

ಕೆ. ಉಮಾವತಿ

ಪೀಠಾಧಿಕಾರಿ(ಪ್ರಭಾರ)

ತೋಟಗಾರಿಕೆ ಇಲಾಖೆ(ರೇಷ್ಮೆ)

ತೋಟಗಾರಿಕೆ ಸಚಿವಾಲಯ

ವಿಷಯ: ಧಾರವಾಡ ಜಿಲ್ಲೆಯ ಹಳೇ ಹುಬ್ಬಳ್ಳಿಯ ಭಾಣತಿಕಟ್ಟೆ ಯಲ್ಲಿರುವ ರೇಷ್ಮೆ ಇಲಾಖೆಯ ಕಟ್ಟಡ ಹಾಗೂ ಖಾಲಿ ಜಾಗವನ್ನು ಹುಬ್ಬಳ್ಳಿ ಪೋಲೀಸ್ ಠಾಣೆ ಕಟ್ಟಡ ನಿರ್ಮಾಣಕ್ಕಾಗಿ ನೀಡುವ ಕುರಿತು.

ಓದಲಾಗಿದೆ : ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಇವರ ಪತ್ರ ಸಂಖ್ಯೆ: ರೇಉಕೋ/ತಾ೦1/ರೇನೂಬಿಸಂ/ಭಾಕ/07/2008-09/797, ದಿನಾಂಕ: 13-09-2012 ಮತ್ತು 31-10-2013/07-11-2013.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 13-09-2012 ಮತ್ತು 31-10-2013/07-11-2013ರ ಪತ್ರಗಳಲ್ಲಿ ಧಾರವಾಡ ಜಿಲ್ಲೆಯ ಹಳೆ ಹುಬ್ಬಳ್ಳಿಯ ಬಾಣತಿಕಟ್ಟೆಯಲ್ಲಿರುವ ರೇಷ್ಮೆ ಇಲಾಖೆಯ ತಾಂತ್ರಿಕ ಸೇವಾ ಕೇಂದ್ರ ಹುಬ್ಬಳ್ಳಿ ಕಚೇರಿಯು ಸೂಕ್ಷ್ಮ ಪ್ರದೇಶದಲ್ಲಿರುವುದರಿಂದ, ಕಿಡಿಗೇಡಿಗಳು ಸರ್ಕಾರದ ಆಸ್ತಿಗೆ ಆಗ್ಗಿಂದಾಗ್ಗೆ ಹಾನಿ ಮಾಡುತ್ತಿದ್ದು. ಭಯದ ವಾತಾವರಣ ಸೃಷ್ಟಿಯಾಗಿದ್ದು. ಇದರಿಂದ ಕಛೇರಿಯ ಮುಖ್ಯ ದಾಖಲಾತಿಗಳನ್ನು ಸುಭದ್ರವಾಗಿ ಇಟ್ಟುಕೊಳ್ಳುವುದು ಕಷ್ಟಕರವಾಗಿದೆಯೆಂದೂ ತಿಳಿಸಿ ಈ ಬಗ್ಗೆ ಪೊಲೀಸರಿಗೆ ದೂರು ದಾಖಲಿಸಿದರೂ ಪ್ರಯೋಜನವಾಗಿರುವುದಿಲ್ಲವೆಂದು, ಬಾಣತಿಕಟ್ಟೆಯ 34.22 ಗುಂಟೆ ಜಾಗದಲ್ಲಿರುವ ಸರ್ಕಾರಿ ರೇಷ್ಮೆ ನೂಲು ಬಿಚ್ಚುವ ಕಟ್ಟಡ, ರೇಷ್ಮೆ ಗೂಡು ಸಂಗ್ರಹಣಾ ಕಟ್ಟಡ ಹಾಗೂ ಕಾಮಲುಗಾರನ ಕಟ್ಟಡ (ಬೋರ್‌ವೆಲ್ ಸಮೇತ) ಗಳನ್ನು ಹಾಗೂ ಖಾಲಿ ಜಾಗವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಬಹುದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ, ಪ್ರಸ್ತಾವನೆಗೆ ಸರ್ಕಾರದ ಅನುಮತಿ ಹಾಗೂ ಆದೇಶ ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು ಧಾರವಾಡ ಜಿಲ್ಲೆಯ ಹಳೆ ಹುಬ್ಬಳಿಯ ಬಾಣತಿಕಟ್ಟೆಯಲ್ಲಿರುವ ರೇಷ್ಮೆ ಇಲಾಖೆಯ ತಾಂತ್ರಿಕ ಸೇವಾ ಕೇಂದ್ರ ಹುಬ್ಬಳ್ಳಿ ಕಚೇರಿಯು ಸೂಕ್ಷ್ಮ ಪ್ರದೇಶದಲ್ಲಿರುವುದರಿಂದ ಬಾಣತಿಕಟ್ಟೆಯ ಸರ್ಕಾರಿ ರೇಷ್ಮೆ ನೂಲು ಬಿಚ್ಚುವ ಕಟ್ಟಡ, ರೇಷ್ಮೆ ಗೂಡು ಸಂಗ್ರಹಣಾ ಕಟ್ಟಡ ಹಾಗೂ ಕಾವಲುಗಾರನ ಕಟ್ಟಡ (ಬೋರ್‌ವೆಲ್ ಸಮೇತ) ಗಳನ್ನು ಹಾಗೂ 34.22 ಗುಂಟೆ ಖಾಲಿ ಜಾಗವನ್ನು ಲೋಕೋಪಯೋಗಿ ಇಲಾಖೆಯು ನಿಗದಿಪಡಿಸುವ ಬಾಡಿಗೆ ದರಗಳನ್ವಯ ಪೊಲೀಸ್ ಇಲಾಖೆಗೆ ಹಸ್ತಾಂತರಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

ಸರ್ಕಾರಿ ಆದೇಶ ಸಂ: ತೋಇ 27 ರೇಯೋವಿ 2012, ಬೆಂಗಳೂರು, ದಿನಾಂಕ: 01-04-2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆಯ ಹಳೆ ಹುಬ್ಬಳ್ಳಿಯ ಬಾಣತಿಕಟ್ಟೆಯಲ್ಲಿರುವ ರೇಷ್ಮೆ ಇಲಾಖೆಯ ತಾಂತ್ರಿಕ ಸೇವಾ ಕೇಂದ್ರ , ಹುಬ್ಬಳ್ಳಿ ಕಚೇರಿಯು ಸೂಕ್ಷ್ಮ ಪ್ರದೇಶದಲ್ಲಿರುವುದರಿಂದ ಬಾಣತಿಕಟ್ಟೆಯ ಸರ್ಕಾರಿ ರೇಷ್ಮೆ ನೂಲು ಬಿಚ್ಚುವ ಕಟ್ಟಡ, ರೇಷ್ಮೆ ಗೂಡು ಸಂಗ್ರಹಣಾ ಕಟ್ಟಡ

ಹಾಗೂ ಕಾಮಲುಗಾರನ ಕಟ್ಟಡ (ಬೋರ್‌ವೆಲ್ ಸಮೇತ) ಗಳನ್ನು ಹಾಗೂ 34.22 ಗುಂಟೆ ಖಾಲಿ ಜಾಗವನ್ನು ಲೋಕೋಪಯೋಗಿ ಇಲಾಖೆಯು ನಿಗದಿಪಡಿಸುವ ಬಾಡಿಗೆ ದರಗಳನ್ವಯ ಪೋಲೀಸ್ ಇಲಾಖೆಗೆ ಹಸ್ತಾಂತರಿಸಲು ಸರ್ಕಾರವು ಆದೇಶಿದೆ.

ಈ ಆದೇಶವನ್ನು ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ: ಆರ್‌ಡಿ 65 ಎಲ್‌ಜಿಪಿ 2002, ದಿನಾಂಕ: 20–12–2002 ರ ಪ್ರತ್ಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 453

ಕೆ. ಉಮಾವತಿ

ಪೀಠಾಧಿಕಾರಿ(ಪ್ರಭಾರ)

ತೋಟಗಾರಿಕೆ ಇಲಾಖೆ(ರೇಷ್ಮೆ)

ತೋಟಗಾರಿಕೆ ಸಚಿವಾಲಯ

ವಿಷಯ: ಚಿಕ್ಕಬಳ್ಳಾಪುರದ ಚದಲಪುರ ರೇಷ್ಮೆ ಇಲಾಖೆಯ ಕಟ್ಟಡವನ್ನು ಪೋಲೀಸ್ ಇಲಾಖೆಯ ಉಪಯೋಗಕ್ಕಾಗಿ ತಾತ್ಕಾಲಿಕವಾಗಿ ಬಾಡಿಗೆ ಆಧಾರದ ಮೇಲೆ ನೀಡುವ ಕುರಿತು.

ಓದಲಾಗಿದೆ :
1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಇವರ ಪತ್ರ ಸಂಖ್ಯೆ: ರೇಊನಿ/ ಮೇದ/ಚಿಪುರ/ಆಸ್ತಿ/09/2013–14, ದಿನಾಂಕ: 12–02–2014.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 65 ಎಲ್.ಜಿ.ಪಿ. 2002, ದಿನಾಂಕ: 20–12–2002.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ: 12–02–2014 ಪತ್ರದಲ್ಲಿ ಕೋಲಾರ ಜಿಲ್ಲೆಯಿಂದ ವಿಭಜನೆಯಾಗಿ ಚಿಕ್ಕಬಳ್ಳಾಪುರ ಜಿಲ್ಲೆಯು 2007 ರಲ್ಲಿ ಕಾರ್ಯರಂಭಗೊಂಡಿದ್ದು, ಈ ಜಿಲ್ಲೆಯಲ್ಲಿ ಜಿಲ್ಲಾ ಪೋಲೀಸ್ ಕಛೇರಿಯನ್ನು ಪ್ರಾರಂಭಿಸಲು ಸೂಕ್ತ ಕಟ್ಟಡವಿಲ್ಲದೆ ಕರ್ತವ್ಯನಿರ್ವಹಿಸುತ್ತಿದ್ದ ಚಿಕ್ಕಬಳ್ಳಾಪುರ ಉಪವಿಭಾಗದ ಕಛೇರಿಯ ಹಳೆಯ ಕಟ್ಟಡದಲ್ಲಿ ಹಾಲಿ ಜಿಲ್ಲಾ ಪೋಲೀಸ್ ಕಛೇರಿ ಕರ್ತವ್ಯ ನಿರ್ವಹಿಸುತ್ತಿದ್ದು, ಕಚೇರಿ ದೈನಂದಿನ ಕಾರ್ಯಕಲಾಪಗಳನ್ನು ನಿರ್ವಹಿಸಲು ಹಾಗೂ ಕಚೇರಿಯಲ್ಲಿನ ಕಡತ, ಟೇಬಲ್, ಕುರ್ಚಿ. ಅಲಮೇರಾಗಳನ್ನು ಇಡಲು ಸೂಕ್ತ ಸ್ಥಳಾವಕಾಶವಿಲ್ಲದೇ ತೊಂದರೆ ಉಂಟಾಗಿರುತ್ತದೆ. ಜೊತೆಗೆ ದೈನಂದಿನ ಕಾರ್ಯ ಕಲಾಪಗಳನ್ನು ನಿರ್ವಹಿಸಲು ಹಾಗೂ ಸಾರ್ವಜನಿಕರಿಗೂ ತೊಂದರೆಯುಂಟಾಗುತ್ತಿದ್ದು, ಇಲಾಖೆಯ ವಿವಿಧ ಶಾಖೆಗಳು ಅತ್ಯಂತ ಇಕ್ಕಟ್ಟಿನ ಸ್ಥಳದಲ್ಲಿ ಕಡತಗಳನ್ನು ಇಡಲು, ಕುಳಿತುಕೊಳ್ಳಲು ಕಿರಿಕಿರಿ ಅನುಭವಿಸುತ್ತಿರುವುದರಿಂದ, ಕಟ್ಟಡ ನಿರ್ಮಿಸಲು ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ. ಸರ್ಕಾರದಿಂದ ಅನುದಾನ ಬಿಡುಗಡೆಯಾದರೂ ಸದರಿ ಸಂಕೀರ್ಣದ ಕಾಮಗಾರಿ ಪ್ರಾರಂಭಿಸಿದಲ್ಲಿ ಪೂರ್ಣಗೊಳ್ಳಲು 2–3 ವರ್ಷಗಳಾಗುವುದರಿಂದ ಪೊಲೀಸ್ ಇಲಾಖೆಯ ಜಿಲ್ಲಾ ಪೊಲೀಸ್ ಕಛೇರಿ ಸಂಕೀರ್ಣ ನಿರ್ಮಾಣವಾಗುವವರೆಗೂ ತಾತ್ಕಾಲಿಕವಾಗಿ ಹಾಲಿ ರೇಷ್ಮೆ ಇಲಾಖೆಯ (ಹಳೆ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ) ಕಟ್ಟಡವನ್ನು ಪೊಲೀಸ್ ಇಲಾಖೆಗೆ ಮಂಜೂರು ಮಾಡಿ ಆದೇಶವನ್ನು ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ: 20–12–2002 ರ ಸರ್ಕಾರಿ ಸುತ್ತೋಲೆಯಲ್ಲಿ ಸರ್ಕಾರದ ಇಲಾಖೆಗಳ ಯೋಜನೆಗಳಿಗೆ ಅಗತ್ಯವಿರುವ ಕಟ್ಟಡಗಳು/ ನಿರ್ಮಾಣ ವಿನ್ಯಾಸಗಳನ್ನು ಕರ್ನಾಟಕ ಸರ್ಕಾರದ ಒಂದು ಇಲಾಖೆಯಿಂದ ಬೇರೊಂದು ಇಲಾಖೆಗೆ ವರ್ಗಾಯಿಸಲಾಗುವ ಪ್ರಕರಣಗಳಿಗೆ ಮಾತ್ರ ಕಂದಾಯ ಇಲಾಖೆಯ ಅಭಿಪ್ರಾಯ/ಸಹಮತಿ ಪಡೆಯಬೇಕಾದ ಅಗತ್ಯವಿರುವುದಿಲ್ಲವೆಂದು ತಿಳಿಸಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಚಿಕ್ಕಬಳ್ಳಾಪುರದಲ್ಲಿ ಜಿಲ್ಲಾ ಪೋಲೀಸ್ ಕಛೇರಿ ಸಂಕೀರ್ಣ ನಿರ್ಮಾಣವಾಗುವವರೆಗೂ ತಾತ್ಕಾಲಿಕವಾಗಿ ಹಾಲಿ ಚಿಕ್ಕಬಳ್ಳಾಪುರ ಹೊರ ವಲಯದ ಚದಲಪುರದ ರೇಷ್ಮೆ ಇಲಾಖೆಯ (ಹಳೇ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡ) ಕಟ್ಟಡವನ್ನು ಜಿಲ್ಲಾ ಪೊಲೀಸ್ ಕಛೇರಿ ಪ್ರಾರಂಭಿಸಲು ಮತ್ತು ಈ ಕಟ್ಟಡಗಳಿಗೆ ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸುವ ದರದ ಆಧಾರದ ಮೇಲೆ ತಾತ್ಕಾಲಿಕವಾಗಿ ಪೋಲೀಸ್ ಇಲಾಖೆಗೆ ನೀಡಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

ಸರ್ಕಾರಿ ಆದೇಶ ಸಂ: ತೋಇ 09 ರೇಯೋವಿ 2014, ಬೆಂಗಳೂರು, ದಿನಾಂಕ: 21–04–2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಚಿಕ್ಕಬಳ್ಳಾಪುರದಲ್ಲಿ ತಾತ್ಕಾಲಿಕವಾಗಿ ಜಿಲ್ಲಾ ಪೋಲೀಸ್ ಕಛೇರಿ ಪ್ರಾರಂಭಿಸಲು ರೇಷ್ಮೆ ಇಲಾಖೆಗೆ ಸೇರಿದ ರೇಷ್ಮೆ ಇಲಾಖೆಯ (ಹಳೇ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡ) ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸುವ ಬಾಡಿಗೆ ದರದ ಆಧಾರದ ಮೇಲೆ ತಾತ್ಕಾಲಿಕವಾಗಿ ಪೋಲೀಸ್ ಇಲಾಖೆಗೆ ಮೂರು ವರ್ಷಗಳ ಅವಧಿಗೆ ನೀಡಲು ಮಂಜೂರಾತಿ ನೀಡಿ ಸರ್ಕಾರವು ಆದೇಶಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 454

ಕೆ. ಉಮಾವತಿ

ಪೀಠಾಧಿಕಾರಿ(ಪ್ರಭಾರ)

ತೋಟಗಾರಿಕೆ ಇಲಾಖೆ(ರೇಷ್ಮೆ)

ENERGY SECRETARIAT

CORRIGENDUM

No. EN 46 VSC 2012, Bangalore, dated: 19.05.2014

In the Government Order No EN20PSR2012 dated 30.0I.2013 for Implementation of "Belaku Yojana" Scheme by Karnataka Renewable Energy Development Limited in the State the following sentences appearing in the Annexure portion viz:-

Annexure, para 2, the main Objectives of the Scheme, (iii) in the existing table

Cost of procurement/transport/installation/CFL	Rs.I0/-
Provision to cater for service charges as Energy Audit, third party verification and miscellaneous	Rs.I0/-

Shall be read as

Storage/transport/installation of CFL and collection of incandescent lamp/ Provision to cater for service charges as Energy Audit, third party verification and miscellaneous charges.	Rs.I0/- per CFL is earmarked, to be given to ESCOMs by KREDL.

Annexure, para 4, timelines:Total Duration for implementing the scheme is 8 weeks Shall be read as Total Duration for implementing the scheme is 6 months.

All other terms and conditions in Government order EN20PSR2012 dated 30.01.2013 and EN46VSC2012 dated 05.04.2014 remain the same.

By Order and in the name of the Governor of Karnataka,

K.L RAMACHANDRA

P.R. 469

DEPUTY SECRETARY TO GOVERNMENT,

ENERGY DEPARTMENT

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವಾಲಯ

ವಿಷಯ: ಪ್ರಸ್ತುತ ಅಸ್ತಿತ್ವದಲ್ಲಿರುವ ಜಿಲ್ಲಾಮಟ್ಟದ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಗಳ ಕಾಲಾವಧಿಯನ್ನು ವಿಸ್ತರಿಸುವ ಕುರಿತು.

ಓದಲಾಗಿದೆ :

3. ಸರ್ಕಾರಿ ಆದೇಶ ಸಂಖ್ಯೆ:ಮಮಇ 206 ಮಭಾಬ 2010, ದಿನಾಂಕ:13.10.2010.
4. ಸರ್ಕಾರಿ ಆದೇಶ ಸಂಖ್ಯೆ:ಮಮಇ 206 ಮಭಾಬ 2010, ದಿನಾಂಕ:14.10.2010.
5. ಸರ್ಕಾರಿ ಆದೇಶ ಸಂಖ್ಯೆ:ಮಮಇ 221 ಮಭಾಬ 2013, ದಿನಾಂಕ:09.10.2013.
6. ಸರ್ಕಾರಿ ಆದೇಶ ಸಂಖ್ಯೆ:ಮಮಇ 278 ಮಭಾಬ 2013(ಭಾ-1), ದಿನಾಂಕ:09.01.2014.
7. ಸರ್ಕಾರಿ ಆದೇಶ ಸಂಖ್ಯೆ:ಮಮಇ 40 ಮಭಾಬ 2014, ದಿನಾಂಕ:05.04.2014.
8. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಪತ್ರ ಸಂ:ಕೆ.ಎಸ್.ಐ.ಸಿ.ಪಿ.ಎಸ್/CWC/JJB/ಆ.ಪ್ರ/40/2012-13, ದಿನಾಂಕ:14.05.2014.

ಪ್ರಸ್ತಾವನೆ:

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ 2000, ತಿದ್ದುಪಡಿ 2006ರ ಸೆಕ್ಷನ್ 4 ಮತ್ತು 29ರಡಿಯಲ್ಲಿ ಕೆಲವು ಷರತ್ತಿನೊಂದಿಗೆ 28 ಜಿಲ್ಲೆಗಳಲ್ಲಿ ಒಟ್ಟು 29 ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು 3 ವರ್ಷದ ಅವಧಿಗೆ ನಾಮನಿರ್ದೇಶನ ಮಾಡಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ರಚಿಸಲಾಗಿತ್ತು.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ 2000, ತಿದ್ದುಪಡಿ 2006ರ ಸೆಕ್ಷನ್ 4 ಮತ್ತು 29ರಡಿಯಲ್ಲಿ ಕೆಲವು ಷರತ್ತಿನೊಂದಿಗೆ ಯಾದಗಿರಿ ಜಿಲ್ಲೆಯನ್ನು ಹೊರತುಪಡಿಸಿ 28 ಜಿಲ್ಲೆಗಳ ಬಾಲನ್ಯಾಯ ಮಂಡಳಿಗಳ ಅಧ್ಯಕ್ಷರು ಹಾಗೂ ಸಮಾಜ ಕಾರ್ಯಕರ್ತರನ್ನು 3 ವರ್ಷದ ಅವಧಿಗೆ ನಾಮನಿರ್ದೇಶನ ಮಾಡಿ ಬಾಲನ್ಯಾಯ ಮಂಡಳಿಗಳನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ರಚಿಸಲಾಗಿತ್ತು.

ದಿನಾಂಕ:13.10.2010ರಲ್ಲಿ ರಚಿಸಲಾಗಿರುವ ಮಕ್ಕಳ ಕಲ್ಯಾಣ ಸಮಿತಿ ಮತ್ತು ದಿನಾಂಕ:14.10.2010ರಲ್ಲಿ ರಚಿಸಲಾಗಿರುವ ಬಾಲನ್ಯಾಯ ಮಂಡಳಿಗಳ ಕಾಲಾವಧಿಯು ಕ್ರಮವಾಗಿ ದಿನಾಂಕ:12.10.2013 ಮತ್ತು 13.10.2013ಕ್ಕೆ ಮುಕ್ತಾಯವಾಗಿದ್ದರಿಂದ ಸದರಿ ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಗಳ ಕಾಲಾವಧಿಯನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳವರೆಗೆ ಅಥವಾ ಮಕ್ಕಳ ಕಲ್ಯಾಣ ಸಮಿತಿ/ ಬಾಲನ್ಯಾಯ ಮಂಡಳಿಗಳನ್ನು ಪುನರ್ ರಚಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಿ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ 2000 ತಿದ್ದುಪಡಿ 2006ರ ಸೆಕ್ಷನ್ 4 ಮತ್ತು 29ರಡಿಯಲ್ಲಿ ಆದೇಶ ಸಂಖ್ಯೆ:ಮಮಇ 221 ಮಭಾಬ 2013, ದಿನಾಂಕ:09.10.2013ರಲ್ಲಿ ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಗಳನ್ನು ಮುಂದುವರಿಸಲಾದ ಕಾಲಾವಧಿಯು ದಿನಾಂಕ:08.01.2014ಕ್ಕೆ ಮುಕ್ತಾಯವಾಗಿರುವುದರಿಂದ ಸದರಿ ಮಕ್ಕಳ ಕಲ್ಯಾಣ ಸಮಿತಿ/ ಬಾಲನ್ಯಾಯ ಮಂಡಳಿಗಳನ್ನು ದಿನಾಂಕ: 09.01.2014ರಿಂದ ಮುಂದಿನ 3 ತಿಂಗಳವರೆಗೆ ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದಲ್ಲಿ ವಿಸ್ತರಿಸಲಾಗಿತ್ತು.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ 2000, ತಿದ್ದುಪಡಿ 2006ರ ಸೆಕ್ಷನ್ 4 ಮತ್ತು 29ರಡಿಯಲ್ಲಿ ರಚಿಸಿರುವ ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಗಳ ಕಾಲಾವಧಿಯನ್ನು ದಿನಾಂಕ: 09.04.2014ರಿಂದ ದಿನಾಂಕ:31.05.2014ರವರೆಗೆ ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಆದೇಶದಲ್ಲಿ ವಿಸ್ತರಿಸಲಾಗಿತ್ತು.

ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಗಳ ಅಧ್ಯಕ್ಷರು ಮತ್ತು ಸದಸ್ಯರ ಆಯ್ಕೆಗಾಗಿ ದಿನಾಂಕ: 10.05.2014ರಿಂದ ಸಂದರ್ಶನ ಪ್ರಕ್ರಿಯೆಯನ್ನು ಆರಂಭಿಸಲಾಗಿದ್ದು, ಸದರಿ ಪ್ರಕ್ರಿಯೆ ಪೂರ್ಣಗೊಳ್ಳಲು ಇನ್ನೂ ಸ್ವಲ್ಪ ಸಮಯಾವಕಾಶ ಅವಶ್ಯವಿದ್ದು, ಪ್ರಸ್ತುತ ಅಸ್ತಿತ್ವದಲ್ಲಿರುವ ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲ ನ್ಯಾಯ ಮಂಡಳಿಗಳ ಕಾಲಾವಧಿಯನ್ನು ವಿಸ್ತರಿಸುವಂತೆ ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಪತ್ರದಲ್ಲಿ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರು ಸರ್ಕಾರವನ್ನು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 79 ಮಭಾಬ 2014, ಬೆಂಗಳೂರು, ದಿನಾಂಕ:30.05.2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ 2000, ತಿದ್ದುಪಡಿ 2006ರ ಸೆಕ್ಷನ್ 4 ಮತ್ತು 29ರಡಿಯಲ್ಲಿ ರಚಿಸಿರುವ ಮಕ್ಕಳ ಕಲ್ಯಾಣ ಸಮಿತಿ/ ಬಾಲನ್ಯಾಯ ಮಂಡಳಿಗಳ ಕಾಲವಧಿಯನ್ನು ದಿನಾಂಕ:01.06.2014 ರಿಂದ ದಿನಾಂಕ:30.06.2014ರವರೆಗೆ ಅಥವಾ ಹೊಸದಾಗಿ ಈ ಸಮಿತಿ ಮತ್ತು ಮಂಡಳಿಗಳನ್ನು ರಚಿಸುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ಈ ವಿಶೇಷ ಸಂದರ್ಭವನ್ನು ಪರಿಗಣಿಸಿ ಈ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ–1(ಪ್ರ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

P.R. 457

S.C. 300

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವಾಲಯ

ವಿಷಯ: ಕೇಂದ್ರ ಸರ್ಕಾರದ ಉದ್ಯೋಗಸ್ಥ ಮಹಿಳೆಯರ ವಸತಿಗೃಹ ಯೋಜನೆಯ ಹೊಸ ಮಾರ್ಗಸೂಚಿಯನ್ವಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಶಿಫಾರಸ್ಸು ಮಾಡಲು **"ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿ"** ಯನ್ನು ರಚಿಸುವ ಕುರಿತು.

ಓದಲಾಗಿದೆ : ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ:ಮಮಅ/ಮಕವಿ/ಉಮವಗೃ/09/2013–14, ದಿನಾಂಕ:06.11.2013.

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರದಲ್ಲಿ ಕೇಂದ್ರ ಸರ್ಕಾರದ ಉದ್ಯೋಗಸ್ಥ ಮಹಿಳೆಯರ ವಸತಿಗೃಹ ನಿರ್ಮಾಣ ಯೋಜನೆಯ ಹೊಸ ಮಾರ್ಗಸೂಚಿಯನ್ವಯ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ರಚಿಸಬೇಕಾಗಿರುತ್ತದೆಯೆಂದು ತಿಳಿಸಿರುತ್ತಾರೆ. ಈ ಸಮಿತಿಯು ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಉದ್ಯೋಗಸ್ಥ ಮಹಿಳೆಯರ ವಸತಿಗೃಹ ನಿರ್ಮಾಣಕ್ಕಾಗಿ ಲಭ್ಯವಿರುವ ಸಾರ್ವಜನಿಕ ಭೂಮಿ, ಸೂಕ್ತ ಸ್ಥಳ ಆಯ್ಕೆ, ಅರ್ಹ ಸಂಸ್ಥೆಗಳಿಂದ ಆಯ್ಕೆಯಾದ ಪ್ರಸ್ತಾವನೆಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸಲು ಮತ್ತು ಕಟ್ಟಡ ನಿರ್ಮಾಣಕ್ಕಾಗಿ ಕಂತುಗಳಲ್ಲಿ ಬಿಡುಗಡೆಯಾಗುವ ಅನುದಾನದ ಬಿಡುಗಡೆಗೆ ಶಿಫಾರಸ್ಸು ಮಾಡುವ ಹಾಗೂ ವಸತಿ ನಿಲಯದ ಕಟ್ಟಡದ ಕಾಮಗಾರಿಯ ಪ್ರಗತಿ ಪರಿಶೀಲನೆ ಒಳಗೊಂಡಂತೆ ಸೂಕ್ತ ಕಾರ್ಯನಿರ್ವಹಣೆಗಾಗಿ ನಿಯತವಾಗಿ ಕಟ್ಟಡದ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಇತ್ಯಾದಿ ಕ್ರಮಗಳನ್ನು ಸಮಿತಿಯು ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.

ಮುಂದುವರೆದು, ಈ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ **"ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿ"**ಯನ್ನು ರಚಿಸಿ ಸೂಕ್ತ ಆದೇಶ ಹೊರಡಿಸುವಂತೆ ಕೋರಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ:–

ಕ್ರಮ ಸಂಖ್ಯೆ	ಅಧಿಕಾರಿಗಳ ವಿವರ	ಪದನಾಮ
1.	ಜಿಲ್ಲಾಧಿಕಾರಿಗಳು	**ಅಧ್ಯಕ್ಷರು**
2.	ಜಿಲ್ಲಾ ಪೋಲೀಸ್ ಅಧೀಕ್ಷಕರು (Superintendent of Police)	**ಸದಸ್ಯರು**
3.	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ಪರಿವೀಕ್ಷಣಾಧಿಕಾರಿ / ರಾಜ್ಯ ಸರ್ಕಾರದ ಯಾವುದೇ ಪ್ರತಿನಿಧಿ	**ಸದಸ್ಯರು**
4.	ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ	**ಸದಸ್ಯರು**

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಕ್ರಮ ಸಂಖ್ಯೆ	ಅಧಿಕಾರಿಗಳ ವಿವರ	ಪದನಾಮ
5.	ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ರತಿನಿಧಿ	**ಸದಸ್ಯರು**
6	ಜಿಲ್ಲೆಯಲ್ಲಿನ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ (ಈ ಯೋಜನೆಯಡಿ ಪ್ರಸ್ತಾವನೆ ಸಲ್ಲಿಸಿರುವ ಅಥವಾ ಈ ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿರುವವರನ್ನು ಹೊರತುಪಡಿಸಿ)	**ಸದಸ್ಯರು**
7.	ಜಿಲ್ಲೆಯಲ್ಲಿ ಅರ್ಹ ವ್ಯಕ್ತಿಗಳು (eminent person) (ಜಿಲ್ಲಾಧಿಕಾರಿಗಳ ವಿವೇಚನೆಗೊಳಪಟ್ಟಂತೆ ನೇಮಕಗೊಂಡವರು)	**ಸದಸ್ಯರು**
8.	ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	**ಸದಸ್ಯ ಕಾರ್ಯದರ್ಶಿ**

ಸರ್ಕಾರದ ಆದೇಶ ಸಂಖ್ಯೆ: ಮಮಇ 255 ಮಭಾಬ 2013 ಬೆಂಗಳೂರು, ದಿನಾಂಕ:04-03-2014

ಪ್ರಸ್ತಾವನೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಕೇಂದ್ರ ಸರ್ಕಾರದ ಉದ್ಯೋಗಸ್ಥ ಮಹಿಳೆಯರ ವಸತಿಗೃಹ ಯೋಜನೆಯ ಹೊಸ ಮಾರ್ಗಸೂಚಿಯನ್ವಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಶಿಫಾರಸ್ಸು ಮಾಡಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ **"ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿ"** ಯನ್ನು ರಚಿಸಿ ಆದೇಶಿಸಿದೆ.

ಕ್ರಮ ಸಂಖ್ಯೆ	ಅಧಿಕಾರಿಗಳ ವಿವರ	ಪದನಾಮ
1.	ಜಿಲ್ಲಾಧಿಕಾರಿಗಳು	ಅಧ್ಯಕ್ಷರು
2.	ಜಿಲ್ಲಾ ಪೊಲೀಸ್ ಅಧೀಕ್ಷಕರು (Superintendent of Police)	ಸದಸ್ಯರು
3.	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ಪರಿವೀಕ್ಷಣಾಧಿಕಾರಿ / ರಾಜ್ಯ ಸರ್ಕಾರದ ಯಾವುದೇ ಪ್ರತಿನಿಧಿ	ಸದಸ್ಯರು
4.	ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ	ಸದಸ್ಯರು
5.	ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ರತಿನಿಧಿ	ಸದಸ್ಯರು
6	ಜಿಲ್ಲೆಯಲ್ಲಿನ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ (ಈ ಯೋಜನೆಯಡಿ ಪ್ರಸ್ತಾವನೆ ಸಲ್ಲಿಸಿರುವ ಅಥವಾ ಈ ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿರುವವರನ್ನು ಹೊರತುಪಡಿಸಿ)	ಸದಸ್ಯರು
7.	ಜಿಲ್ಲೆಯಲ್ಲಿ ಅರ್ಹ ವ್ಯಕ್ತಿಗಳು (eminent person) (ಜಿಲ್ಲಾಧಿಕಾರಿಗಳಿಂದ ನೇಮಕಗೊಂಡವರು)	ಸದಸ್ಯರು
8.	ಜಿಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	ಸದಸ್ಯ ಕಾರ್ಯದರ್ಶಿ

ಈ ಮೇಲ್ಕಂಡ ಸಮಿತಿಯ ಸದಸ್ಯರಲ್ಲಿ ಕನಿಷ್ಠ ಇಬ್ಬರು ಮಹಿಳೆಯರು ಇರತಕದ್ದು.

ಈ ಸಮಿತಿಯು ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿಯನ್ವಯ ಕಾರ್ಯನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

P.R. 458

S.C. 100

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಕಂದಾಯ ತಾಲ್ಲೂಕಿಗೆ ಎರಡು ನೋಟರಿ ಹುದ್ದೆಗಳನ್ನು ತುಂಬುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ:ಲಾ 03 ಎಲ್‌ಸಿಎಲ್ 2012, ದಿ:06.12.2012.
2) ಸರ್ಕಾರದ ಪತ್ರ ಸಂಖ್ಯೆ:ಲಾ 116 ಎಲ್‌ಸಿಎಲ್ 2013, ದಿ:24.08.2013.
3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಜಿಲ್ಲೆ, ದಿ:19.11.2013.
4) ನೋಟರಿಗಳ ತಿದ್ದುಪಡಿ ನಿಯಮಗಳು 2009ರ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 114(ಎ) ದಿ: 24.02.2009.
5) ಸಂದರ್ಶನ ಮಂಡಳಿ ರಚನೆ ಅಧಿಸೂಚನೆ ಸಂಖ್ಯೆ:ಲಾ 61 ಎಲ್‌ಸಿಎಲ್ 2009, ದಿ:24.07.2010 ಮತ್ತು ಲಾ 53 ಎಲ್‌ಸಿಎಲ್ 2013, ದಿ: 23.7.2013.
6) ಸಂದರ್ಶನ ಸೂಚನಾ ಪತ್ರ ಸಂಖ್ಯೆ:ಲಾ 116 ಎಲ್‌ಸಿಎಲ್ 2013, ದಿ: 01.02.2014.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶ ದಿನಾಂಕ: 06.12.2012ರಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಕಂದಾಯ ತಾಲ್ಲೂಕಿಗೆ ಎರಡು ನೋಟರಿ ಹುದ್ದೆಗಳನ್ನು ಸೃಜಿಸಿದ್ದು, ಅದರಂತೆ, ಓದಲಾದ (2)ರ ಸರ್ಕಾರದ ಪತ್ರದಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸ್ಥಳೀಯರಿಂದ ಅರ್ಜಿಗಳನ್ನು ಆಹ್ವಾನಿಸಿ ನೋಟರಿಗಳ ಅಧಿನಿಯಮ/ ನಿಯಮಗಳು ಹಾಗೂ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾಷರತ್ತು) ನಿಯಮಗಳು 1977ರ ನಿಯಮ 12 ರಡಿಯಲ್ಲಿ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಜಿಲ್ಲೆ ಇವರನ್ನು ದಿನಾಂಕ:24.08.2013 ರಂದು ಕೋರಲಾಗಿತ್ತು.

ಅದರಂತೆ ಮೇಲೆ ಓದಲಾದ (3)ರಲ್ಲಿ ದಿನಾಂಕ:19.11.2013ರ ಪ್ರಸ್ತಾವನೆಯೊಂದಿಗೆ 42 ಜನರ ಮೆಮೋರಿಯಲ್ಸ್‌ಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಆ ಪ್ರಸ್ತಾವನೆಯನ್ನು ಮೇಲೆ ಓದಲಾದ (4)ರಲ್ಲಿ ನೋಟರಿಗಳ ತಿದ್ದುಪಡಿ ನಿಯಮಗಳು 2009ರನ್ವಯ ಕರ್ನಾಟಕ ರಾಜ್ಯದಿಂದ ನೋಟರಿಗಳ ನೇಮಕಕ್ಕಾಗಿ ಮೇಲೆ ಓದಲಾದ (5)ರ ಅಧಿಸೂಚನೆಗಳಲ್ಲಿ ರಚಿಸಲಾಗಿರುವ ಸಂದರ್ಶನ ಮಂಡಳಿಯ ಪರಿಶೀಲನೆಗೆ ಕಳುಹಿಸಿ ಎಲ್ಲಾ ಅಭ್ಯರ್ಥಿಗಳನ್ನು ಸಂದರ್ಶನ ಮಂಡಳಿಯ ಮುಂದೆ ಸಂದರ್ಶನಕ್ಕೆ ಹಾಜರಾಗುವಂತೆ ಮೇಲೆ ಓದಲಾದ (6)ರ ದಿನಾಂಕ:01.02.2014 ರಲ್ಲಿ ಸಂದರ್ಶನ ಸೂಚನಾ ಪತ್ರದಲ್ಲಿ ಸೂಚಿಸಲಾಗಿತ್ತು. ಅದರಂತೆ, ಸಂದರ್ಶನ ಮಂಡಳಿಯು ಸಂದರ್ಶನ ನಡೆಸಿ ವರದಿ ಸಲ್ಲಿಸಿದೆ.

ಸಂದರ್ಶನ ಮಂಡಳಿಯ ಶಿಫಾರಸ್ಸನ್ನು ಸರ್ಕಾರವು ಪರಿಗಣಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲಾ 116 ಎಲ್‌ಸಿಎಲ್ 2013, ಬೆಂಗಳೂರು, ದಿನಾಂಕ:26.05.2014.

ನೋಟರಿಗಳ ಅಧಿನಿಯಮ, 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿಗಳ ನಿಯಮಗಳು, 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ಪರಿಶೀಲಿಸಿ, ನಿಯಮ 8(1)ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ (1)ಶ್ರೀಮತಿ ಸುಧಾ ನಾಯಕ್, ವಕೀಲರು, ಡಾಟರ್ ಆಫ್ ಚೇತೋಮಿತ್ರ, ನಂ. 302, ರಾಜೇಶ್ವರಿ ಅಪಾರ್ಟ್‌ಮೆಂಟ್, ಹಳ್ಳಿಕೇರಿ ಹಾಸ್ಪಿಟಲ್ ಎದುರು, ಕೇಶ್ವಾಪುರ, ಹುಬ್ಬಳ್ಳಿ–580023. ಮತ್ತು (2)ಶ್ರೀ ಶಿವಳ್ಳಿ ಮೊಹಮ್ಮದ್ ಮೂಸಾ, ವಕೀಲರು, ಸನ್ ಆಫ್ ಅಬ್ದುಲ್ ಖಾದಿರ್, ಹೌಸ್ ನಂ. 1540, ಪ್ರಿಯದರ್ಶಿನಿ ಕಾಲೋನಿ, ಮಿಲ್ಲತ್ ನಗರ್, ಮಂತೂರ್ ರೋಡ್, ಹುಬ್ಬಳ್ಳಿ–580020 ಇವರುಗಳನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಹುಬ್ಬಳ್ಳಿ ಕಂದಾಯ ನೋಟರಿಗಳನ್ನಾಗಿ ನೇಮಿಸಿದೆ.

ಸದರಿ ವಕೀಲರು ಲೆಕ್ಕ ಶೀರ್ಷಿಕೆ 0070–ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ–501–0–ಇತರೆ ಸ್ವೀಕೃತಿಗಳು–06 ಇತರೆ ಬಾಬ್ತುಗಳಿಗೆ (0070–01–501–0–06) ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ರೂ. 1000–00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರ ನೀಡಲಾಗುವುದು.

ವೃತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರುಗಳ ಹೆಸರುಗಳನ್ನು ನೋಟರಿ ಅಧಿನಿಯಮ, 1952ರ ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಎಸ್.ಜಯರಾಮು
ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ–2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

P.R. 459
S.C. 25

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಮುಧೋಳ ಕಂದಾಯ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇಲ್ಲಿ ಖಾಲಿಯಿರುವ ಒಂದು ನೋಟರಿ ಹುದ್ದೆಯನ್ನು ತುಂಬುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ:ಲಾ 409 ಎಲ್‌ಸಿಎಲ್ 2011, ದಿ:05.12.2012.
2) ಸರ್ಕಾರದ ಪತ್ರ ಸಂಖ್ಯೆ:ಲಾ 117 ಎಲ್‌ಸಿಎಲ್ 2013, ದಿ:24.07.2013.
3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ, ದಿ:12.12.2013.
4) ನೋಟರಿಗಳ ತಿದ್ದುಪಡಿ ನಿಯಮಗಳು 2009ರ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 114(ಎ) ದಿ: 24.02.2009.
5) ಸಂದರ್ಶನ ಮಂಡಳಿ ರಚನೆ ಅಧಿಸೂಚನೆ ಸಂಖ್ಯೆ:ಲಾ 61 ಎಲ್‌ಸಿಎಲ್ 2009, ದಿ:24.07.2010 ಮತ್ತು ಲಾ 53 ಎಲ್‌ಸಿಎಲ್ 2013, ದಿ: 23.7.2013.
6) ಸಂದರ್ಶನ ಸೂಚನಾ ಪತ್ರ ಸಂಖ್ಯೆ:ಲಾ 117 ಎಲ್‌ಸಿಎಲ್ 2013, ದಿ: 01.02.2014.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶ ದಿನಾಂಕ: 05.12.2012ರಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ ಕಂದಾಯ ತಾಲ್ಲೂಕಿಗೆ ಒಂದು ನೋಟರಿ ಹುದ್ದೆಯನ್ನು ಸೃಜಿಸಿದ್ದು, ಅದರಂತೆ, ಓದಲಾದ (2)ರ ಸರ್ಕಾರದ ಪತ್ರದಲ್ಲಿ ಸದರಿ ಹುದ್ದೆಯನ್ನು ಭರ್ತಿ ಮಾಡಲು ಸ್ಥಳೀಯರಿಂದ ಅರ್ಜಿಗಳನ್ನು ಆಹ್ವಾನಿಸಿ ನೋಟರಿಗಳ ಅಧಿನಿಯಮ/ ನಿಯಮಗಳು ಹಾಗೂ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾಷರತ್ತು) ನಿಯಮಗಳು 1977ರ ನಿಯಮ 12 ರಡಿಯಲ್ಲಿ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಇವರನ್ನು ದಿನಾಂಕ:24.07.2013 ರಂದು ಕೋರಲಾಗಿತ್ತು.

ಅದರಂತೆ ಮೇಲೆ ಓದಲಾದ (3)ರಲ್ಲಿ ದಿನಾಂಕ: 12.12.2013ರ ಪ್ರಸ್ತಾವನೆಯೊಂದಿಗೆ 10 ಜನರ ಮೆಮೋರಿಯಲ್ಸ್‌ಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಆ ಪ್ರಸ್ತಾವನೆಯನ್ನು ಮೇಲೆ ಓದಲಾದ (4)ರಲ್ಲಿ ನೋಟರಿಗಳ ತಿದ್ದುಪಡಿ ನಿಯಮಗಳು 2009ರನ್ವಯ ಕರ್ನಾಟಕ ರಾಜ್ಯದಿಂದ ನೋಟರಿಗಳ ನೇಮಕಕ್ಕಾಗಿ ಮೇಲೆ ಓದಲಾದ (5)ರ ಅಧಿಸೂಚನೆಗಳಲ್ಲಿ ರಚಿಸಲಾಗಿರುವ ಸಂದರ್ಶನ ಮಂಡಳಿಯ ಪರಿಶೀಲನೆಗೆ ಕಳುಹಿಸಿ ಎಲ್ಲಾ ಅಭ್ಯರ್ಥಿಗಳನ್ನು ಸಂದರ್ಶನ ಮಂಡಳಿಯ ಮುಂದೆ ಸಂದರ್ಶನಕ್ಕೆ ಹಾಜರಾಗುವಂತೆ ಮೇಲೆ ಓದಲಾದ (6)ರ ದಿನಾಂಕ:01.02.2014 ರಲ್ಲಿ ಸಂದರ್ಶನ ಸೂಚನಾ ಪತ್ರದಲ್ಲಿ ಸೂಚಿಸಲಾಗಿತ್ತು ಅದರಂತೆ ಸಂದರ್ಶನ ಮಂಡಳಿಯು ಸಂದರ್ಶನ ನಡೆಸಿ ವರದಿ ಸಲ್ಲಿಸಿದೆ.

ಸಂದರ್ಶನ ಮಂಡಳಿಯ ಶಿಫಾರಸ್ಸನ್ನು ಸರ್ಕಾರವು ಪರಿಗಣಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲಾ 117 ಎಲ್‌ಸಿಎಲ್ 2013, ಬೆಂಗಳೂರು, ದಿನಾಂಕ:26.05.2014.

ನೋಟರಿಗಳ ಅಧಿನಿಯಮ, 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿಗಳ ನಿಯಮಗಳು, 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ಪರಿಶೀಲಿಸಿ, ನಿಯಮ 8(1)ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಶ್ರೀ ಭೀಮಪ್ಪ ಬಾಳಪ್ಪ ಭಟಕುರ್ಕಿ. ವಕೀಲರು, ಸನ್ ಆಫ್ ಶ್ರೀ ಬಾಳಪ್ಪ ಭೀಮಪ್ಪ ಭಟಕುರ್ಕಿ, ಗುಲಗಲ್ ಜಂಬಗಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ–587313 ಇವರ ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಮುಧೋಳ ಕಂದಾಯ ತಾಲ್ಲೂಕಿನ ನೋಟರಿಯನ್ನಾಗಿ ನೇಮಿಸಿದೆ.

ಸದರಿ ವಕೀಲರು ಲೆಕ್ಕ ಶೀರ್ಷಿಕೆ 0070–ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ–501–0–ಇತರೆ ಸ್ವೀಕೃತಿಗಳು–06 ಇತರೆ ಬಾಬ್ತುಗಳಿಗೆ (0070–01–501–0–06) ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ರೂ.1000–00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢಿಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರ ನೀಡಲಾಗುವುದು.

ವೃತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ, 1952ರ ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಎಸ್.ಜಯರಾಮು
ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ–2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

P.R. 460
S.C. 25

ಆರ್ಥಿಕ ಸಚಿವಾಲಯ

ವಿಷಯ: ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಆಇ 34 ಮುಭನಿ 2000, ದಿನಾಂಕ: 20.10.2000.
2) ಸರ್ಕಾರಿ ಆದೇಶ ಸಂಖ್ಯೆ: ಆಇ 23 ಮುಭನಿ 2013, ದಿನಾಂಕ: 25.03.2014.
3) ಮಹಾಲೇಖಪಾಲರ ಪತ್ರ ಸಂಖ್ಯೆ: ಎಫ್‌ಎಂ(ಸಿ)/ಜಿ1/2014–15/26, ದಿನಾಂಕ: 5.5.2014.

ಪ್ರಸ್ತಾವನೆ:

ರಾಜ್ಯ ಸರ್ಕಾರಿ ನೌಕರರು ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ/ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ಮೇಲೆ ಕ್ರಸಂ. (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿನ ಅಧಿಕಾರ ಪ್ರತ್ಯಾಯೋಜನೆ ಮಿತಿಯನ್ನು ಪರಿಷ್ಕರಿಸಬೇಕೆಂದು ಇಲಾಖೆಗಳಿಂದ ಬೇಡಿಕೆ ಬಂದ

ಹಿನ್ನೆಲೆಯಲ್ಲಿ, ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪರಿಷ್ಕೃತ ಅಧಿಕಾರ ಪ್ರತ್ಯಾಯೋಜನೆಯನ್ನು ಹೊರಡಿಸಲಾಗಿತ್ತು. ಮಹಾಲೇಖಪಾಲರು ಮೇಲೆ ಕ್ರ.ಸಂ.(3) ರಲ್ಲಿ ಓದಲಾದ ಪತ್ರದಲ್ಲಿ, ಸರ್ಕಾರದ ದಿನಾಂಕ: 25.03.2014ರ ಆದೇಶದಲ್ಲಿ ತಾತ್ಕಾಲಿಕ ಮುಂಗಡ ಮಂಜೂರಾತಿ ಅಧಿಕಾರಿ ಪ್ರತ್ಯಾಯೋಜನೆಯಲ್ಲಿ ಜಂಟಿ ನಿರ್ದೇಶಕರು/ನಿಯಂತ್ರಣಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು ಮಂಜೂರು ಮಾಡಬಹುದಾದ ಮೊತ್ತ ಕ್ರಮವಾಗಿ 2,00,000/– ಮತ್ತು 1,00,000/– ಬದಲಿಗೆ ಶೇಕಡವಾರು ಮಿತಿಯನ್ನು ನಿಗದಿಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುತ್ತಾರೆ. ಮಹಾಲೇಖಪಾಲರ ಸಲಹೆಯಂತೆ ಈ ಆದೇಶವನ್ನು ತಿದ್ದುಪಡಿ ಮಾಡುವುದು ಸೂಕ್ತವೆಂದು ಸರ್ಕಾರ ಭಾವಿಸಿದೆ. ಆದುದರಿಂದ, ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ದಿನಾಂಕ: 25.03.2014ರ ಸರ್ಕಾರಿ ಆದೇಶವನ್ನು ಹಿಂಪಡೆದು, ವಿವಿಧ ಹಂತದ ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಮರುಪರಿಷ್ಕರಿಸಲು ನಿರ್ಧರಿಸಿ ಸರ್ಕಾರ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ ಮುಭನಿ 2013, ಬೆಂಗಳೂರು, ದಿನಾಂಕ : 03.06.2014.

ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ವಿವಿಧ ಹಂತದ ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೆಳಕಂಡಂತೆ ಮರುಪರಿಷ್ಕರಿಸಿದೆ.

I) **ತಾತ್ಕಾಲಿಕ ಮುಂಗಡ:** ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 15, 15–A ಮತ್ತು ನಿಯಮ 16ರನ್ವಯ (ಸರ್ಕಾರದ ಆದೇಶ ಸಂಖ್ಯೆ:ಆಇ 48 ಮಕಮು 1994, ದಿ:21.10.1994ರಲ್ಲಿ ಮನೆಗೆ ಕೊಂಡೊಯ್ಯುವ ವೇತನದ [Take Home Salary] ಬಗ್ಗೆ ಸೂಚಿಸಿರುವ ಮಿತಿಯಂತೆ ಹಾಗೂ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 16ರನ್ವಯ ಮರುಸಂದಾಯ ಅವಧಿಯನ್ನು ಚಂದಾದಾರನ ಲಭ್ಯವಿರುವ ಸೇವಾ ಅವಧಿಗನುಸಾರ ನಿಗಧಿಪಡಿಸುವ ಷರತ್ತಿಗೆ ಒಳಪಡತಕ್ಕದ್ದು.)

ಕ್ರ.ಸಂ.	ಹಂತ	ಅಧಿಕಾರ ಪ್ರತ್ಯಾಯೋಜನೆ
1	ಇಲಾಖಾ ಮುಖ್ಯಸ್ಥರು	ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.80ರಷ್ಟು ಮುಂಗಡ ಮಂಜೂರು ಮಾಡಬಹುದು.
2	ಜಂಟಿನಿರ್ದೇಶಕರು/ನಿಯಂತ್ರಣಾಧಿಕಾರಿಗಳು	ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.75ರಷ್ಟು ಒಟ್ಟಾರೆ ಸೇವೆಯಲ್ಲಿ 3 ಬಾರಿ ಮುಂಗಡ ಮಂಜೂರು ಮಾಡಬಹುದು.
3	ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು	ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.70ರಷ್ಟು ಒಟ್ಟಾರೆ ಸೇವೆಯಲ್ಲಿ 3 ಬಾರಿ ಮುಂಗಡ ಮಂಜೂರು ಮಾಡಬಹುದು.

II) **ಅಂಶಿಕ ಅಂತಿಮ ಹಣ ವಾಪಸಾತಿ:** ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 27–Bರನ್ವಯ.

ಕ್ರ.ಸಂ.	ಹಂತ	ಅಧಿಕಾರ ಪ್ರತ್ಯಾಯೋಜನೆ
1	ಇಲಾಖಾ ಮುಖ್ಯಸ್ಥರು	ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ. 90ರಷ್ಟು ಮಂಜೂರು ಮಾಡಬಹುದು.
2	ಜಂಟಿನಿರ್ದೇಶಕರು/ನಿಯಂತ್ರಣಾಧಿಕಾರಿಗಳು	ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ. 80ರಷ್ಟು ಮಂಜೂರು ಮಾಡಬಹುದು.
3	ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು	ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ. 70ರಷ್ಟು ಮಂಜೂರು ಮಾಡಬಹುದು.

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 1957ಕ್ಕೆ ಪ್ರತ್ಯೇಕವಾಗಿ ತಿದ್ದುಪಡಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಲಕ್ಷ್ಮಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡ).

PR. 512
SC. 100

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಸಿಆಸುಇ 70 ಇಆಇ 2014 ಬೆಂಗಳೂರು, ದಿನಾಂಕ: 16ನೇ ಆಗಸ್ಟ್ 2014

ವಿಷಯ: 2014–15ನೇ ಸಾಲಿಗಾಗಿ ಕೇಂದ್ರ ಸರ್ಕಾರ ನೀಡುವ ರಾಷ್ಟ್ರೀಯ ಇ–ಆಡಳಿತ ಪ್ರಶಸ್ತಿಗಳಿಗಾಗಿ ನಾಮ ನಿರ್ದೇಶನಗಳನ್ನು ಕಳುಹಿಸುವ ಬಗ್ಗೆ.

ಉಲ್ಲೇಖ:
1) ಕೇಂದ್ರ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ ಮತ್ತು ಪಿಂಚಣಿಗಳ ಮಂತ್ರಾಲಯ, ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಕುಂದು ಕೊರತೆಗಳ ಇಲಾಖೆ, ನವದೆಹಲಿ, ಇವರ ದಿನಾಂಕ: 21.07.2014ರ ಅ.ಸ. ಪತ್ರ ಸಂಖ್ಯೆ:13015/2/2014–ಇ–ಜಿಒವಿ(ಬಿ) ಮತ್ತು ಅದಕ್ಕೆ ಲಗತ್ತಿಸಿದ ಅದೇ ಸಂಖ್ಯೆಯ, ಅವರ ದಿನಾಂಕ: 27.06.2014ರ ಪತ್ರ
2) ದಿನಾಂಕ: 19.07.2013ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 62 ಇಆಇ 2013(2)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ, ಕೇಂದ್ರ ಸರ್ಕಾರದ ದಿನಾಂಕ: 21.07.2014ರ ಅ.ಸ ಪತ್ರದ ಮತ್ತು ಅದಕ್ಕೆ ಲಗತ್ತಿಸಿದ ದಿನಾಂಕ: 27.06.2014ರ ಪತ್ರದ ಪ್ರತಿಗಳನ್ನು ಅವುಗಳ ಅಡಕದೊಂದಿಗೆ ಈ ಸುತ್ತೋಲೆಗೆ ಲಗತ್ತಿಸಿದೆ. ಅದು ಸ್ವಯಂವೇದ್ಯವಾಗಿರುತ್ತದೆ. 2014–15ನೇ ಸಾಲಿಗಾಗಿ ಕೇಂದ್ರ ಸರ್ಕಾರ ನೀಡುವ ರಾಷ್ಟ್ರೀಯ ಇ–ಆಡಳಿತ ಪ್ರಶಸ್ತಿಗಾಗಿ ನಾಮ ನಿರ್ದೇಶನಗಳನ್ನು ಸದರಿ ಅ.ಸ. ಪತ್ರದನ್ವಯ ಆಹ್ವಾನಿಸಲಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಯನ್ನು http://darpg.gov.in ಈ ವೆಬ್‌ಸೈಟ್‌ಯಿಂದ ಪಡೆಯಬಹುದಾಗಿದೆ.

2. ಸದರಿ ಪ್ರಶಸ್ತಿಗಳಿಗಾಗಿ ನಾಮ ನಿರ್ದೇಶನಗಳನ್ನು ಕಳುಹಿಸಲು ದಿನಾಂಕ: 31.08.2014ಕೊನೆಯ ದಿನಾಂಕವಾಗಿರುತ್ತದೆ.

3. ಪ್ರಸ್ತಾಪಿತ ನಾಮ ನಿರ್ದೇಶನಗಳನ್ನು ಮೇಲೆ (2)ರಲ್ಲಿ ಉಲ್ಲೇಖಿಸಿದ ದಿನಾಂಕ: 19.07.2013ರ ಆದೇಶದನ್ವಯ ರಚಿಸಲಾದ, ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿನ ಸಮಿತಿಯ ಮುಂದೆ ಮಂಡಿಸಬೇಕಾಗಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001, ಇವರು ಸದರಿ ಸಮಿತಿಯ ಸದಸ್ಯ–ಕಾರ್ಯದರ್ಶಿಯಾಗಿರುತ್ತಾರೆ. ಆದುದರಿಂದ ಪ್ರಸ್ತಾಪಿತ ನಾಮನಿರ್ದೇಶನಗಳನ್ನು ಆನ್‌ಲೈನ್ ಮೂಲಕ ಅವರಿಗೆ **ceoceg@karnataka.gov.in** ಈ ಇ–ಮೇಲ್ ವಿಳಾಸಕ್ಕೆ ಕಳುಹಿಸಲು ಕೋರಿದೆ.

4. ಕರ್ನಾಟಕ ಸಚಿವಾಲಯದ ಆಯಾಯ ಆಡಳಿತ ಇಲಾಖೆಯ ವ್ಯಾಪ್ತಿಯೊಳಗೆ ಬರುವ ಸಂಬಂಧಿಸಿದ ಕ್ಷೇತ್ರ ಇಲಾಖೆ, ಸ್ಥಳೀಯ ಸಂಸ್ಥೆ, ಸಾರ್ವಜನಿಕ ಉದ್ದಿಮೆ ಇತ್ಯಾದಿಗಳ ಗಮನಕ್ಕೆ ಈ ಸೂಚನೆಗಳನ್ನು ತರಲು ಹಾಗೂ ಸದರಿ ಪ್ರಶಸ್ತಿಗಾಗಿ ನಾಮ ನಿರ್ದೇಶನಗಳನ್ನು, ಕೇಂದ್ರ ಸರ್ಕಾರದ ನಿಗದಿತ ಮಾರ್ಗಸೂಚಿಗಳನ್ವಯ ಹಾಗೂ ಕಂಡಿಕೆ 3ರನ್ವಯ ತಿಳಿಸಿದ ಕಾರ್ಯವಿಧಾನದಂತೆ ಕಳುಹಿಸುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳನ್ನು ಈ ಮೂಲಕ ಕೋರಿದೆ.

ಎಸ್. ವೀಣಾ
ಪೀಠಾಧಿಕಾರಿ–1,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ–ಆಡಳಿತ)

PR-619
SC-400

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59